## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 256
2. ಮಾನ್ಯ ಸದಸ್ಯರ ಹೆಸರು : ಶ್ರೀ ಸಿ.ಟಿ ರವಿ (ವಿಧಾನಸಭಾ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 09.12.2025
4. ಉತ್ತರಿಸುವ ಸಚಿವರು : ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr>
<td>(ಅ)</td>
<td>ಕಬ್ಬು ಪೂರೈಕೆ ಮಾಡಿರುವ ರೈತರಿಗೆ ಸಕ್ಕರೆ ಕಾರ್ಖಾನೆಗಳಿಂದ (ಸರ್ಕಾರದ ಒಡೆತನದ ಕಾರ್ಖಾನೆಗಳೂ ಸೇರಿದಂತೆ) ಪಾವತಿ ಆಗಬೇಕಿರುವ ಬಾಕಿ ಮೊತ್ತ ಎಷ್ಟು; ಸಕ್ಕರೆ ಕಾರ್ಖಾನೆಗಳಿಂದ ಬಾಕಿ ಮೊತ್ತವನ್ನು ಕೊಡಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; (ಜಿಲ್ಲಾವಾರು ವಿವರವನ್ನು ಕಾರ್ಖಾನೆ ಹೆಸರು ಸಹಿತ ನೀಡುವುದು);</td>
<td>ರಾಜ್ಯದ ಸಕ್ಕರೆ ಕಾರ್ಖಾನೆಗಳು ಕಳೆದ ಮೂರು ವರ್ಷಗಳಲ್ಲಿ ಕಬ್ಬು ಸರಬರಾಜು ಮಾಡಿದ ರೈತರಿಗೆ ಕೇಂದ್ರ ಸರ್ಕಾರವು ನಿಗದಿಪಡಿಸಿರುವ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯಂತೆ ಕಬ್ಬಿನ ಬಿಲ್ಲನ್ನು ಪೂರ್ಣವಾಗಿ ಪಾವತಿಸಿರುತ್ತವೆ. ಕಾರ್ಖಾನೆಗಳು ಕೇಂದ್ರ ಸರ್ಕಾರವು ನಿಗದಿಪಡಿಸಿರುವ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯಂತೆ (FRP) ರೈತರಿಗೆ ಪಾವತಿಸಬೇಕಾದ ಹಾಗೂ ಪಾವತಿಸಿರುವ ಕಬ್ಬಿನ ಮೊತ್ತದ ವಿವರ ಈ ಕೆಳಗಿನಂತಿದೆ.<br>
(ರೂ.ಕೋಟಿಗಳಲ್ಲಿ)
<table>
<tr><th>ವರ್ಷ</th><th>ರೈತರಿಗೆ ಪಾವತಿಸಬೇಕಾಗಿದ್ದ ಒಟ್ಟು ಕಬ್ಬಿನ ಬಿಲ್ ಮೊತ್ತ</th><th>ರೈತರಿಗೆ ಪಾವತಿಸಿರುವ ಒಟ್ಟು ಕಬ್ಬಿನ ಬಿಲ್ ಮೊತ್ತ</th><th>ಬಾಕಿ</th></tr>
<tr><td>2022-23</td><td>19747.85</td><td>20138.93</td><td>0</td></tr>
<tr><td>2023-24</td><td>19898.65</td><td>20645.91</td><td>0</td></tr>
<tr><td>2024-25</td><td>18221.88</td><td>19569.15</td><td>0</td></tr>
</table>
ಕೆಲವೊಂದು ಸಕ್ಕರೆ ಕಾರ್ಖಾನೆಗಳು ಕೇಂದ್ರ ಸರ್ಕಾರವು ನಿಗದಿಪಡಿಸಿರುವ FRP ದರಕ್ಕೂ ಮೇಲ್ಪಟ್ಟು ಕಬ್ಬಿನ ಬಿಲ್ಲನ್ನು ಪಾವತಿಸಿರುತ್ತವೆ.<br>
ರಾಜ್ಯದಲ್ಲಿ 2024-25ನೇ ಸಾಲಿನಲ್ಲಿ ಒಟ್ಟು 79 ಸಕ್ಕರೆ ಕಾರ್ಖಾನೆಗಳು ಕಾರ್ಯನಿರ್ವಹಿಸಿದ್ದು, ಈ ಕಾರ್ಖಾನೆಗಳು 521.67 ಲಕ್ಷ ಮೆಟ್ರಿಕ್ ಟನ್ ಕಬ್ಬು ನುರಿಸಿ, 41.83 ಲಕ್ಷ ಮೆಟ್ರಿಕ್ ಟನ್ ಸಕ್ಕರೆ ಉತ್ಪಾದಿಸಿವೆ. ಈ ಅವಧಿಯಲ್ಲಿ ಸಕ್ಕರೆ ಕಾರ್ಖಾನೆಗಳು ಕೇಂದ್ರ ಸರ್ಕಾರ ನಿಗದಿಪಡಿಸಿರುವ ಎಫ್.ಆರ್.ಪಿ ದರದಂತೆ ಪಾವತಿಸಬೇಕಾದ ಕಬ್ಬು ಬಿಲ್ಲು ಮೊತ್ತ ರೂ.18221.88 ಕೋಟಿಗಳಾಗಿರುತ್ತದೆ. ಈ ಪೈಕಿ ಕಾರ್ಖಾನೆಗಳು ಒಟ್ಟು ಮೊತ್ತ ರೂ.19569.15 ಕೋಟಿಗಳಷ್ಟು ಪಾವತಿಸಿರುತ್ತವೆ. ಕೆಲವು ಕಾರ್ಖಾನೆಗಳು ಎಫ್.ಆರ್.ಪಿ ದರಕ್ಕಿಂತ ಮೇಲ್ಪಟ್ಟು ಕಬ್ಬಿನ ಬಿಲ್ಲನ್ನು ಪಾವತಿಸಿರುತ್ತವೆ. 2024-25 ರ ಹಂಗಾಮಿನಲ್ಲಿ ದಿನಾಂಕ: 31.10.2025 ರ ಅಂತ್ಯಕ್ಕೆ ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳು ಕಬ್ಬು ಸರಬರಾಜು ಮಾಡಿದ ರೈತರಿಗೆ ಪೂರ್ಣವಾಗಿ ಕಬ್ಬಿನ ಬಿಲ್ಲನ್ನು ಪಾವತಿಸಿರುತ್ತವೆ.<br>
2025-26 ನೇ ಹಂಗಾಮಿನಲ್ಲಿ ಒಟ್ಟು 81 ಸಕ್ಕರೆ ಕಾರ್ಖಾನೆಗಳು ಕಬ್ಬು ಅರೆಯುವ ಕಾರ್ಯವನ್ನು ನಿರ್ವಹಿಸುತ್ತಿವೆ. ಈ ಕಾರ್ಖಾನೆಗಳು ದಿನಾಂಕ:30.11.2025 ರಲ್ಲಿದ್ದಂತೆ 140.53 ಲಕ್ಷ ಮೆ.ಟನ್ ಕಬ್ಬನ್ನು ನುರಿಸಿ 10.57 ಲಕ್ಷ ಮೆ. ಟನ್ ಸಕ್ಕರೆ ಉತ್ಪಾದಿಸಿರುತ್ತವೆ. ಸದರಿ ಕಾರ್ಖಾನೆಗಳು ಎಫ್.ಆರ್.ಪಿ ದರದಂತೆ ಪಾವತಿಸಬೇಕಾದ ಕಬ್ಬು ಬಿಲ್ಲು ಮೊತ್ತ ರೂ.5086.22 ಕೋಟಿಗಳಾಗಿರುತ್ತದೆ. ಈ ಪೈಕಿ ಕಾರ್ಖಾನೆಗಳು ಒಟ್ಟು ರೂ.2559.99 ಕೋಟಿಗಳಷ್ಟು ಪಾವತಿಸಿರುತ್ತವೆ. ಉಳಿದ ಮೊತ್ತ ರೂ.2404.61 ಕೋಟಿಗಳಷ್ಟು ಪಾವತಿಸಬೇಕಾಗಿರುತ್ತದೆ. ಪ್ರಸ್ತುತ ಹಂಗಾಮು ನವೆಂಬರ್-2025 ನೇ ಎರಡನೇ ವಾರದಲ್ಲಿ ಪ್ರಾರಂಭವಾಗಿದ್ದು, ಪ್ರಸಕ್ತ ಹಂಗಾಮು ಚಾಲ್ತಿಯಲ್ಲಿರುವುದರಿಂದ ಕಾರ್ಖಾನೆಗಳು ಕಬ್ಬಿನ ಬಿಲ್ಲನ್ನು ಪಾವತಿಸಲು ಅವಕಾಶವಿರುತ್ತದೆ. ಜಿಲ್ಲಾವಾರು ಹಾಗೂ ಕಾರ್ಖಾನೆವಾರು ಪಾವತಿ ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಿದೆ.</td>
</tr>
</table>

<table>
<tr>
<td>(ಆ)</td>
<td>ಕಬ್ಬು ನುರಿಯುವುದರಿಂದ ಯಾವ ಯಾವ ಉಪ ಉತ್ಪನ್ನಗಳು ದೊರೆಯುತ್ತವೆ; ಸಕ್ಕರೆ ಮಾರಾಟದಿಂದ ಮತ್ತು ಈ ಉಪ ಉತ್ಪನ್ನಗಳ ಮಾರಾಟದಿಂದ ಕಾರ್ಖಾನೆಗೆ ದೊರೆಯುವ ಮೊತ್ತವೆಷ್ಟು; (ಸಂಪೂರ್ಣ ವಿವರ ನೀಡುವುದು):</td>
<td>ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳು ರೈತರಿಂದ ಖರೀದಿಸುವ ಕಬ್ಬಿನಿಂದ ಸಕ್ಕರೆಯನ್ನು ಉತ್ಪಾದಿಸಿದಲ್ಲಿ ಪ್ರತಿ ಮೆ.ಟನ್ ಕಬ್ಬಿಗೆ ಪ್ರಾಥಮಿಕ ಉಪ ಉತ್ಪನ್ನಗಳಾಗಿ ಕಾಕಂಬಿ, ಬಗ್ಯಾಸ್, ಪ್ರೆಸ್‌ಮಡ್‌ಗಳನ್ನು ಉತ್ಪಾದಿಸಲಾಗುತ್ತಿದ್ದು, ಇವುಗಳ ಉತ್ಪಾದನಾ ಪ್ರಮಾಣ ಮತ್ತು ಪ್ರಸ್ತುತವಿರುವ ಮಾರುಕಟ್ಟೆ ದರದ ವಿವರಗಳು ಈ ಕೆಳಗಿನಂತಿವೆ.
<table>
<tr><th>ಕ್ರ.ಸಂ</th><th>ಉತ್ಪನ್ನ / ಉಪ ಉತ್ಪನ್ನ</th><th>ಉತ್ಪಾದಿಸಲಾಗುವ ಪ್ರಮಾಣ</th><th>ಬೆಲೆ ಪ್ರತಿ ಕೆ.ಜಿ ಗೆ (ರೂ.ಗಳಲ್ಲಿ)</th></tr>
<tr><td>1</td><td>ಸಕ್ಕರೆ</td><td>105 ರಿಂದ 115 ಕೆಜಿ</td><td>38</td></tr>
<tr><td>2</td><td>ಕಾಕಂಬಿ</td><td>40 ರಿಂದ 50 ಕೆಜಿ</td><td>10</td></tr>
<tr><td>3</td><td>ಬಗ್ಯಾಸ್</td><td>280 ರಿಂದ 320 ಕೆಜಿ</td><td>2.50</td></tr>
<tr><td>4</td><td>ಪ್ರೆಸ್‌ಮಡ್</td><td>30 ರಿಂದ 40 ಕೆಜಿ</td><td>0.60</td></tr>
</table>
ಸಕ್ಕರೆ ಕಾರ್ಖಾನೆಗಳು ಉಪ ಉತ್ಪನ್ನಗಳ ಜೊತೆಗೆ ಮಾಧ್ಯಮಿಕ ಉತ್ಪನ್ನಗಳಾದ ಎಥನಾಲ್ ಮತ್ತು ಸಹ ವಿದ್ಯುತ್ (ಕೋ-ಜೆನ್) ಸಹ ಉತ್ಪಾದಿಸಲಾಗುತ್ತಿದೆ. ಎಥನಾಲ್ ಉತ್ಪಾದಿಸಿದಲ್ಲಿ ಪ್ರತಿ ಮೆ.ಟನ್ ಕಬ್ಬಿಗೆ ಉತ್ಪಾದಿಸಲಾಗುವ ಅಂದಾಜು ಎಥನಾಲ್, ಪ್ರಮಾಣ ಮತ್ತು ಪ್ರಸ್ತುತವಿರುವ ಮಾರುಕಟ್ಟೆ ದರ ಈ ಕೆಳಗಿನಂತಿದೆ.
<table>
<tr><th>ಕ್ರ. ಸಂ.</th><th>ಉತ್ಪನ್ನ / ಉಪ ಉತ್ಪನ್ನ</th><th>ಉತ್ಪಾದಿಸಲಾಗುವ ಪ್ರಮಾಣ</th><th>ಬೆಲೆ (ರೂ.ಗಳಲ್ಲಿ)</th></tr>
<tr><td>1</td><td>ಎಥನಾಲ್</td><td>70 ಲೀಟರ್ಸ್</td><td>65 /ಲೀಟರ್</td></tr>
</table>
ಒಂದು ವೇಳೆ ಸಕ್ಕರೆ ಕಾರ್ಖಾನೆಗಳು 280 ರಿಂದ 320 ಕೆಜಿಗಳಷ್ಟು ಬಗ್ಯಾಸ್ ಬಳಸಿ ಸಹ ವಿದ್ಯುತ್ ತಯಾರಿಸಿದ್ದಲ್ಲಿ 100 ಯುನಿಟ್‌ಗಳಷ್ಟು ವಿದ್ಯುತ್ ಉತ್ಪಾದನೆಯಾಗುತ್ತದೆ. ಪ್ರಸ್ತುತ ಪ್ರತಿ ಯುನಿಟ್ ವಿದ್ಯುತ್‌ಗೆ ರೂ.4/- ಗಳಿದ್ದು ಒಟ್ಟು 100X 4 = ರೂ.400/- ಗಳಾಗುತ್ತದೆ.<br><br>
ಮುಂದುವರೆದು, ಸಕ್ಕರೆ ಕಾರ್ಖಾನೆಗಳು ಅಂದಾಜು 4 ರಿಂದ 4.2 ಕೆಜಿ ಕಾಕಂಬಿಯಿಂದ 1 ಲೀಟರಷ್ಟು ಎಥನಾಲ್‌ನ್ನು ಉತ್ಪಾದಿಸುತ್ತವೆ.<br><br>
ಈ ಮೇಲಿನ ಅಂಕಿ-ಅಂಶಗಳು ಆಯಾ ಸಕ್ಕರೆ ಕಾರ್ಖಾನೆಗಳ ಸಕ್ಕರೆ ಇಳುವರಿಯನ್ನಾಧರಿಸಿ ವ್ಯತ್ಯಾಸವಾಗುತ್ತದೆ. ಸಹ ವಿದ್ಯುತ್ ಹೊರತುಪಡಿಸಿ ಬೇರೆ ಉತ್ಪನ್ನಗಳನ್ನು ಸರ್ಕಾರದಿಂದ ಖರೀದಿಸಲಾಗುತ್ತಿಲ್ಲ.</td>
</tr>
<tr>
<td>(ಇ)</td>
<td>ರಾಜ್ಯದಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳು ನಷ್ಟದಲ್ಲಿವೆ; ನಷ್ಟದಲ್ಲಿರುವ ಸಕ್ಕರೆ ಕಾರ್ಖಾನೆಗಳಿಂದ ರೈತರಿಗೆ ಪಾವತಿ ಆಗಬೇಕಿರುವ ಬಾಕಿ ಮೊತ್ತವೆಷ್ಟು; ಈ ಮೊತ್ತವನ್ನು ರೈತರಿಗೆ ಪಾವತಿಸಲು ಸರ್ಕಾರದ ಕೈಗೊಂಡ ಕ್ರಮವೇನು;</td>
<td>ರಾಜ್ಯದಲ್ಲಿ ಪ್ರಸಕ್ತ 2025-26 ನೇ ಹಂಗಾಮಿನಲ್ಲಿ ಒಟ್ಟು 81 ಸಕ್ಕರೆ ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿವೆ. ದಿನಾಂಕ:31.03.2025 ರ ಅಂತ್ಯಕ್ಕೆ ಇದ್ದಂತೆ ಕಾರ್ಖಾನೆವಾರು ಲಾಭ-ನಷ್ಟದ ವಿವರಗಳನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ.<br><br>
ಮುಂದುವರೆದು, 2024-25 ಹಂಗಾಮಿನಲ್ಲಿ ದಿನಾಂಕ:31.10.2025 ರ ಅಂತ್ಯಕ್ಕೆ ರಾಜ್ಯದ ಸಕ್ಕರೆ ಕಾರ್ಖಾನೆಗಳು ಕಬ್ಬು ಸರಬರಾಜು ಮಾಡಿದ ರೈತರಿಗೆ ಪೂರ್ಣವಾಗಿ ಕಬ್ಬಿನ ಬಿಲ್ಲನ್ನು ಪಾವತಿಸಿರುತ್ತವೆ.</td>
</tr>
</table>

| | | |
|---|---|---|
| (ಈ) | ಕಬ್ಬಿಗೆ ದರ ನಿಗದಿ ವಿಚಾರದಲ್ಲಿ ರೈತರು ಮತ್ತು ಸಕ್ಕರೆ ಕಾರ್ಖಾನೆಗಳು ಸರ್ಕಾರದ ಮುಂದಿಟ್ಟಿರುವ ಬೇಡಿಕೆಗಳು; ಇವರ ಬೇಡಿಕೆಗಳನ್ನು ಸರ್ಕಾರ ಒಪ್ಪಿದೆಯೇ; ಸರ್ಕಾರ ನಿಗದಿ ಮಾಡಿದ್ದ ಮೊತ್ತವನ್ನು ನೀಡಲು ಕಾರ್ಖಾನೆಗಳು ನಿರಾಕರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸರ್ಕಾರ ಈ ವಿಚಾರದಲ್ಲಿ ಯಾವ ಕ್ರಮ ಕೈಗೊಂಡಿದೆ; (ವಿವರ ನೀಡುವುದು); | ಕೇಂದ್ರ ಸರ್ಕಾರವು ನಿಗದಿಪಡಿಸಿರುವ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯು ನ್ಯಾಯಯುತವಾಗಿ ಇಲ್ಲದೇ ಇರುವ ಕಾರಣ ರೈತರು ಬೆಳೆದ ಕಬ್ಬಿಗೆ ಸರಿಯಾದ ಬೆಲೆ ಸಿಗುತ್ತಿಲ್ಲವೆಂದು ಮತ್ತು ಉತ್ಪಾದನೆಗೆ ಆಗುವ ವೆಚ್ಚವನ್ನು ಗಣನೆಗೆ ತೆಗೆದುಕೊಳ್ಳದೇ ಇಳುವರಿ (Recovery) ಆಧಾರದ ಮೇಲೆ ಬೆಲೆ ನಿರ್ಧಾರವಾಗುತ್ತಿರುವುದರಿಂದ ಇಳುವರಿ ವರದಿಯು ಕೂಡ ಪಾರದರ್ಶಕವಾಗಿಲ್ಲವೆಂದು, ರೈತರಿಗೆ ಕಬ್ಬಿನ ದರದಲ್ಲಿ ವ್ಯತ್ಯಾಸವಾಗುತ್ತಿದ್ದು ಕೇಂದ್ರ ಸರ್ಕಾರವು ನಿಗಧಿಪಡಿಸಿರುವ ಎಫ್‌ಆರ್‌ಪಿ ದರವನ್ನು ಒಪ್ಪಲು ಸಾಧ್ಯವಿಲ್ಲದ ಹಿನ್ನೆಲೆಯಲ್ಲಿ, ಪ್ರಸಕ್ತ 2025-26 ನೇ ಹಂಗಾಮಿಗೆ ಪ್ರತಿ ಮೆ.ಟನ್ ಕಬ್ಬಿಗೆ ರೂ.3500/-ಗಳನ್ನು (ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚ ಹೊರತುಪಡಿಸಿ) ನಿಗಧಿಪಡಿಸುವಂತೆ ರಾಜ್ಯ ರೈತ ಸಂಘಟನೆಗಳು ಮತ್ತು ರೈತ ಮುಖಂಡರು ಸರ್ಕಾರಕ್ಕೆ ಬೇಡಿಕೆ ಸಲ್ಲಿಸಿದ್ದರು.<br>ಈ ಹಿನ್ನೆಲೆಯಲ್ಲಿ, ದಿನಾಂಕ:07.11.2025ರಂದು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳ ಮಾಲೀಕರು / ಪ್ರತಿನಿಧಿಗಳೊಂದಿಗೆ ಮತ್ತು ರಾಜ್ಯದ ಕಬ್ಬು ಬೆಳೆಗಾರರು ಹಾಗೂ ರೈತ ಸಂಘಟನೆಗಳ ಮುಖಂಡರು ಮತ್ತು ಪ್ರತಿನಿಧಿಗಳೊಂದಿಗೆ ಸುಧೀರ್ಘವಾಗಿ ಸಭೆಯನ್ನು ಜರುಗಿಸಲಾಗಿರುತ್ತದೆ. ಸದರಿ ಸಭೆಯಲ್ಲಿ, ರಾಜ್ಯದ ಉತ್ತರ ಭಾಗದ ಕಬ್ಬು ನುರಿಸುವ ಹಂಗಾಮು ಪ್ರಾರಂಭವಾಗಿರುವುದರಿಂದ ರೈತರು ತಮ್ಮ ಕಬ್ಬಿಗೆ ಹೆಚ್ಚಿನ ಬೆಲೆಯನ್ನು ನಿಗದಿಪಡಿಸುವಂತೆ ಒತ್ತಾಯಿಸಿ ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲ್ಲೂಕಿನ ಗುರ್ಲಾಪುರ ಕ್ರಾಸ್‌ನಲ್ಲಿ ನಡೆಸುತ್ತಿರುವ ಪ್ರತಿಭಟನೆಯ ಕುರಿತು ಹಾಗೂ ಬೆಳಗಾವಿ ಜಿಲ್ಲೆಯ ವಿವಿಧ ಸಕ್ಕರೆ ಕಾರ್ಖಾನೆಗಳ ಮಾಲೀಕರು ಮತ್ತು ಪ್ರತಿನಿಧಿಗಳೊಂದಿಗೆ ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ ಇವರು ನಡೆಸಿರುವ ಸಭೆಗಳ ಕುರಿತು ಹಾಗೂ ಪ್ರತಿಭಟನಾ ಸ್ಥಳದಲ್ಲಿ ರೈತ ಪ್ರತಿನಿಧಿಗಳೊಂದಿಗೆ ನಡೆಸಿದ ಸಂಧಾನ ಸಭೆಗಳ ಕುರಿತು ಚರ್ಚಿಸಲಾಯಿತು. ರೈತರ ಪ್ರತಿಭಟನೆಗಳು ಬಾಗಲಕೋಟೆ, ವಿಜಯಪುರ ಕಲಬುರಗಿ, ಹಾವೇರಿ ಮತ್ತು ಇತರೆ ಜಿಲ್ಲೆಗಳಲ್ಲಿಯೂ ತೀವ್ರ ಸ್ವರೂಪ ಪಡೆದುಕೊಂಡಿರುವ ಕುರಿತು ಜಿಲ್ಲಾಧಿಕಾರಿಗಳು ವಿಡೀಯೋ ಕಾನ್ಫರೆನ್ಸ್ ಮೂಲಕ ಸಭೆಯ ಗಮನಕ್ಕೆ ತಂದಿರುತ್ತಾರೆ. ಕೇಂದ್ರ ಸರ್ಕಾರವು ರೈತರ ಕಬ್ಬಿಗೆ ನಿಗದಿಪಡಿಸಿರುವ ಎಫ್.ಆರ್.ಪಿ. ಯು ರೈತರಿಗೆ ಒಪ್ಪಿಗೆಯಾಗದೇ ಇರುವುದರಿಂದ ಮತ್ತು ಅನೇಕ ಕಾರ್ಖಾನೆಗಳು ರೈತರೊಂದಿಗೆ ಸಹಕಾರ ಮನೋಭಾವದೊಂದಿಗೆ ವ್ಯವಹರಿಸುವ ಉದ್ದೇಶದಿಂದ ಸರ್ಕಾರವು ನಿಗದಿಪಡಿಸಿರುವ ಎಫ್.ಆರ್.ಪಿ ಗಿಂತ ಹೆಚ್ಚಿನ ದರವನ್ನು ಹಿಂದಿನ ವರ್ಷಗಳಲ್ಲಿ ನೀಡಿರುವುದನ್ನು ಪರಿಗಣಿಸಿ, ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ 2025-26ನೇ ಹಂಗಾಮಿನಲ್ಲಿ ಸಕ್ಕರೆ ಕಾರ್ಖಾನೆಗಳು ಪಾವತಿಸಬೇಕಾದ ಕನಿಷ್ಠ ಹೆಚ್ಚುವರಿ ಕಬ್ಬು ಬೆಲೆಯನ್ನು ಇಳುವರಿ ಆಧಾರದ ಮೇಲೆ ನಿಗದಿಪಡಿಸಲು ಹಾಗೂ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ರಾಜ್ಯ ಸರ್ಕಾರದಿಂದ ಆರ್ಥಿಕ ನೆರವನ್ನು ನೀಡಲು ಸಭೆಯು ತೀರ್ಮಾನಿಸಿರುತ್ತದೆ. |

**<u>ರೈತರ ಪ್ರಮುಖ ಬೇಡಿಕೆಗಳು:</u>**

1. ಪ್ರಸಕ್ತ 2025-26 ನೇ ಸಾಲಿಗೆ ಪ್ರತಿ ಮೆ.ಟನ್ ಕಬ್ಬಿಗೆ ರೂ.3500/ ಗಳ ದರವನ್ನುನಿಗಧಿಪಡಿಸಬೇಕು (ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚ ಹೊರತುಪಡಿಸಿ)
2. ಸಕ್ಕರೆ ಕಾರ್ಖಾನೆಗಳು ಕಬ್ಬಿನ ತೂಕ ಮತ್ತು ಸಕ್ಕರೆ ಇಳುವರಿಯಲ್ಲಿ ರೈತರಿಗೆ ಮೋಸ ಮಾಡುತ್ತಿದ್ದು ಇದನ್ನು ತಡೆಯಲು ಕ್ರಮ ಕೈಗೊಳ್ಳಬೇಕು.
3. ಸಕ್ಕರೆ ಇಳುವರಿಯನ್ನು ಪರಿಶೀಲಿಸಲು ಸಕ್ಕರೆ ಕಾರ್ಖಾನೆಗಳ ಮುಂದೆ ಸರ್ಕಾರವೇ ಪ್ರಯೋಗಾಲಯಗಳನ್ನು ಸ್ಥಾಪನೆ ಮಾಡಬೇಕು.
4. ಕೆಲವೊಂದು ಸಕ್ಕರೆ ಕಾರ್ಖಾನೆಗಳು ರೈತರಿಗೆ ಪಾವತಿಸಲು ಕಬ್ಬಿನ ಬಿಲ್ಲು ಬಾಕಿ ಉಳಿಸಿಕೊಂಡಿದ್ದು ಈ ಬಾಕಿಗಳನ್ನು ಪಾವತಿಸಬೇಕು.

**<u>ಸಕ್ಕರೆ ಕಾರ್ಖಾನೆಗಳ ಬೇಡಿಕೆಗಳು:</u>**

1. ಕೇಂದ್ರ ಸರ್ಕಾರವು ಸಕ್ಕರೆಗೆ ಕನಿಷ್ಠ ಮಾರಾಟ ಬೆಲೆಯನ್ನು ಪ್ರತಿ ಕೆ.ಜಿ. ಗೆ ರೂ.31/- ಗಳನ್ನು 2019 ರಲ್ಲಿ ನಿಗಧಿಪಡಿಸಿದ್ದು, ಕಳೆದ 06 ವರ್ಷಗಳಿಂದ ಸಕ್ಕರೆ ದರವನ್ನು ಹೆಚ್ಚಿಸಿರುವುದಿಲ್ಲ. ಆದರೆ ಕಬ್ಬಿನ ಬೆಲೆ ಎಫ್‌ಆರ್‌ಪಿ ಯನ್ನು ಪ್ರತಿ ವರ್ಷ ಹೆಚ್ಚಿಸುತ್ತಾ ಬಂದಿರುತ್ತದೆ. ಇದರಿಂದಾಗಿ ಸಕ್ಕರೆ ಕಾರ್ಖಾನೆಗಳಿಗೆ ಆರ್ಥಿಕವಾಗಿ ತೊಂದರೆಯಾಗಿರುತ್ತದೆ. ಆದ್ದರಿಂದ ಸಕ್ಕರೆಯ ಕನಿಷ್ಠ ಮಾರಾಟ ಬೆಲೆಯನ್ನು ಹೆಚ್ಚಿಸಬೇಕು.
2. ಕೇಂದ್ರ ಸರ್ಕಾರವು ಸಕ್ಕರೆ ರಫ್ತು ಮಾಡಲು ಅವಕಾಶ ನೀಡಬೇಕು.
3. ರಾಜ್ಯದ ಸಕ್ಕರೆ ಕಾರ್ಖಾನೆಗಳು ಉತ್ಪಾದಿಸುವ ಎಥನಾಲ್ ದರವನ್ನು ಪರಿಷ್ಕರಿಸಬೇಕು ಮತ್ತು ಉತ್ಪಾದನಾ ಪ್ರಮಾಣಕ್ಕನುಗುಣವಾಗಿ ಕೇಂದ್ರ ಸರ್ಕಾರವು ಎಥನಾಲ್ ಹಂಚಿಕೆಯನ್ನು ಮಾಡಬೇಕು.
4. ಹೊಸದಾಗಿ ಸಕ್ಕರೆ ಕಾರ್ಖಾನೆಗಳ ಸ್ಥಾಪನೆಯ ಸಂಬಂಧ ಬರುವ ಪ್ರಸ್ತಾವನೆಗಳಿಗೆ ಹಾಲಿ ಇರುವ ಸಕ್ಕರೆ ಕಾರ್ಖಾನೆಗಳಿಂದ ಕನಿಷ್ಠ 25 ಕಿ.ಮೀ ಅಂತರಕ್ಕೆ ಅವಕಾಶ ಕಲ್ಪಿಸುವುದು. ರಾಜ್ಯ ಸರ್ಕಾರವು ಸಕ್ಕರೆ ಕಾರ್ಖಾನೆಗಳೊಂದಿಗಿನ ವಿದ್ಯುತ್ ಖರೀದಿ ಒಪ್ಪಂದವನ್ನು ನವೀಕರಿಸುವುದು.
5. ವಿದ್ಯುತ್ ಮಾರಾಟದ ಮೇಲೆ ರಾಜ್ಯ ಸರ್ಕಾರವು ಪ್ರತಿ ಯೂನಿಟ್‌ಗೆ ವಿಧಿಸಿರುವ ತೆರಿಗೆಯನ್ನು ಪುನರ್ ಪರಿಶೀಲಿಸುವುದು.
6. ಸಕ್ಕರೆ ಕಾರ್ಖಾನೆಗಳು ನದಿಯಿಂದ ಎತ್ತುವ ನೀರಿನ ತೆರಿಗೆಯನ್ನು ರಾಜ್ಯ ಸರ್ಕಾರವು ಹೆಚ್ಚಿಸಿರುವುದನ್ನು ಪುನರ್ ಪರಿಶೀಲಿಸುವುದು.

ಕಬ್ಬು ಬೆಳೆಗಾರ ರೈತರು ಮತ್ತು ಸಕ್ಕರೆ ಕಾರ್ಖಾನೆಗಳ ಬೇಡಿಕೆಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ವಿಸ್ತೃತವಾಗಿ ಚರ್ಚಿಸಲಾಗಿರುತ್ತದೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ದಿನಾಂಕ:06.11.2025 ಮತ್ತು 08.11.2025 ರಂದು ಸನ್ಮಾನ್ಯ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿರುತ್ತಾರೆ. ಇದಕ್ಕೆ ಪ್ರತಿಯಾಗಿ ಮಾನ್ಯ ಕೇಂದ್ರ ಗ್ರಾಹಕರ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆ ಸಚಿವರು ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರವನ್ನು ಬರೆದಿರುತ್ತಾರೆ.

ಅಲ್ಲದೇ, ಮಾನ್ಯ ಮುಖ್ಯಮಂತ್ರಿಗಳು ದಿನಾಂಕ:17.11.2025ರಂದು ಸನ್ಮಾನ್ಯ ಪ್ರಧಾನ ಮಂತ್ರಿಗಳನ್ನು ಭೇಟಿಯಾಗಿ ಮನವಿ ಪತ್ರವನ್ನು ನೀಡಿ ಕಬ್ಬು ಬೆಳೆಗಾರರ ಮತ್ತು ಸಕ್ಕರೆ ಕಾರ್ಖಾನೆಗಳ ಬೇಡಿಕೆಗಳ ಕುರಿತು ಚರ್ಚೆ ಮಾಡಿರುತ್ತಾರೆ. ಮೇಲ್ಕಂಡ ಪತ್ರ ಮತ್ತು ಚರ್ಚೆಗಳ ಹಿನ್ನೆಲೆಯಲ್ಲಿ, ಕೇಂದ್ರ ಸರ್ಕಾರವು 2025-26ನೇ ಹಂಗಾಮಿನಲ್ಲಿ ದೇಶದ ಸಕ್ಕರೆ ಕಾರ್ಖಾನೆಗಳು 15.00 ಲಕ್ಷ ಮೆ.ಟನ್ ಸಕ್ಕರೆ ರಫ್ತು ಮಾಡಲು ಅನುಮತಿ ನೀಡಿರುತ್ತದೆ. ಇದರಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ 247 ಲಕ್ಷ ಮೆ.ಟನ್ ಸಕ್ಕರೆ ರಫ್ತು ಮಾಡಲು ಅವಕಾಶ ಕಲ್ಪಿಸಲಾಗಿದೆ.

2025-26ನೇ ಹಂಗಾಮಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ಸಂಬಂಧಿಸಿದ ಸಕ್ಕರೆ ಕಾರ್ಖಾನೆಗಳು ಪಾವತಿಸಬೇಕಾದ ಕನಿಷ್ಟ ಹೆಚ್ಚುವರಿ ಕಬ್ಬು ಬೆಲೆಯನ್ನು ನಿಗದಿಪಡಿಸಲು ಹಾಗೂ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ರಾಜ್ಯ ಸರ್ಕಾರದಿಂದ ಆರ್ಥಿಕ ನೆರವನ್ನು ಒಂದು ಬಾರಿಯ ಕ್ರಮವಾಗಿ ಈ ಕೆಳಕಂಡಂತೆ ನಿಗದಿಪಡಿಸಿ ಆದೇಶಿಸಿದೆ.

| ಇಳುವರಿ | ಎಫ್.ಆರ್.ಪಿ (ಪ್ರತಿ ಮೆ.ಟನ್) (ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚವನ್ನು ಒಳಗೊಂಡಂತೆ) (ರೂ.ಗಳಲ್ಲಿ) | ಸಕ್ಕರೆ ಕಾರ್ಖಾನೆಗಳು ಮೊದಲನೇ ಕಂತಿನಲ್ಲಿ ರೈತರಿಗೆ ನೀಡಲು ಒಪ್ಪಿರುವ ಮೊತ್ತ ರೂ.ಗಳಲ್ಲಿ (ಪ್ರತಿ ಮೆ.ಟನ್ ಗೆ) (ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚವನ್ನು ಹೊರತುಪಡಿಸಿ ) | ಎರಡನೇ ಕಂತಿನಲ್ಲಿ ಪಾವತಿಸಬೇಕಾದ ಮೊತ್ತ (ರೂ.ಗಳಲ್ಲಿ) | | | ಒಟ್ಟು ಮೊತ್ತ (ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚವನ್ನು ಹೊರತುಪಡಿಸಿ) (ರೂ.ಗಳಲ್ಲಿ) |
|---|---|---|---|---|---|---|
| | | | ಸಕ್ಕರೆ ಕಾರ್ಖಾನೆಗಳು | ರಾಜ್ಯ ಸರ್ಕಾರ | ಒಟ್ಟು | |
| 1 | 2 | 3 | 4 | 5 | 6 | 7 (3+6) |
| 9.5% ಅಥವಾ ಕಡಿಮೆ | 3290.5 | ಕೇಂದ್ರ ಸರ್ಕಾರದ ಎಫ್.ಆರ್.ಪಿ ದರದನ್ವಯ ರೈತರಿಗೆ ನೀಡಲು ಒಪ್ಪಿರುವ ಮೊತ್ತ | 50 | 50 | 100 | ಕಾಲಂ 3 ರಲ್ಲಿನ ಮೊತ್ತಕ್ಕೆ ಎರಡನೇ ಕಂತಿನ ರೂ.100.00 ಗಳನ್ನು ಸೇರಿಸಿ ರೈತರಿಗೆ ನೀಡಬೇಕಾದ ಮೊತ್ತ |
| 10.25% | 3550 | 3100 | 50 | 50 | 100 | 3200.00 |
| 11.25% | 3896 | 3200 | 50 | 50 | 100 | 3300.00 |

* 10.25 - 9.5 % ಸಕ್ಕರೆ ಇಳುವರಿ ಪ್ರಮಾಣ ನಡುವೆ ಪ್ರತಿ 0.1 % ಕಡಿಮೆ ಸಕ್ಕರೆ ಇಳುವರಿಗೆ ಅನುಪಾತಕ್ಕೆ ಅನುಗುಣವಾಗಿ ರೂ.3.46 ಮೊತ್ತವನ್ನು ಪ್ರತಿ ಕ್ವಿಂಟಾಲ್‌ಗೆ ಪರಿಗಣಿಸುವುದು.

* 11.25 - 10.25 % ಸಕ್ಕರೆ ಇಳುವರಿ ಪ್ರಮಾಣದ ನಡುವೆ, ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಿದಂತೆ ಪ್ರತಿ 0.1 % ಕಡಿಮೆ ಸಕ್ಕರೆ ಇಳುವರಿಗೆ ಅನುಪಾತಕ್ಕೆ ಅನುಗುಣವಾಗಿ ರೂ.1.00 ಮೊತ್ತವನ್ನು ಪ್ರತಿ ಕ್ವಿಂಟಾಲ್‌ಗೆ ಪರಿಗಣಿಸುವುದು.

ರಾಜ್ಯದ ಉತ್ತರ ಭಾಗದಲ್ಲಿ ಸಕ್ಕರೆ ಕಾರ್ಖಾನೆಗಳು ನವೆಂಬರ್ 2025ರ ಎರಡನೇ ವಾರದಿಂದ 2025-26ನೇ ಸಾಲಿನ ಕಬ್ಬು ಅರೆಯುವ ಕಾರ್ಯವನ್ನು ಪ್ರಾರಂಭಿಸಿದ್ದು, ಹಂಗಾಮು ಮುಕ್ತಾಯಗೊಂಡ ನಂತರ ಸಕ್ಕರೆ ಕಾರ್ಖಾನೆಗಳು ಕಬ್ಬು ಸರಬರಾಜು ಮಾಡಿದ ರೈತರಿಗೆ ಪಾವತಿಸಿದ ಕಬ್ಬಿನ ಬೆಲೆ ಮತ್ತು ಮೊತ್ತದ ಕುರಿತಂತೆ ಪೂರ್ಣ ಪ್ರಮಾಣದ ಅಂಕಿ ಅಂಶಗಳು ಲಭ್ಯವಾಗಲಿವೆ. ಮುಂದುವರಿದು, ಮೇಲಿನ ಆದೇಶದಲ್ಲಿ ಸರ್ಕಾರ ಹಾಗೂ ಸಕ್ಕರೆ ಕಾರ್ಖಾನೆಗಳು ರೈತರಿಗೆ ಪಾವತಿಸುವ ಒಂದು ಬಾರಿಯ ಆರ್ಥಿಕ ನೆರವನ್ನು ಎರಡನೇ ಕಂತಿನಲ್ಲಿ ಪಾವತಿಸಲು ಆದೇಶಿಸಿದ್ದು, ಅದರಂತೆ ಕ್ರಮವಹಿಸಲಾಗುವುದು

| | | |
|---|---|---|
| (ಉ) | ಇತ್ತೀಚೆಗೆ ನಡೆದ ರೈತರ ಪ್ರತಿಭಟನೆ ವೇಳೆ ಕಬ್ಬು ಲಾರಿಗಳಿಗೆ ಬೆಂಕಿ ಬಿದ್ದು ರೈತರಿಗೆ ಆಗಿರುವ ನಷ್ಟ ಎಷ್ಟು; ಈ ನಷ್ಟವನ್ನು ಭರಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ? | ಬಾಗಲಕೋಟೆ ಜಿಲ್ಲೆಯ ರಬಕವಿ-ಬನಹಟ್ಟಿ ತಾಲೂಕಿನ ಸೈದಾಪೂರ ಗ್ರಾಮದ ಗೋದಾವರಿ ಬಯೋರಿಫೈನರಿಸ್ ಲಿಮಿಟೆಡ್ ಸಮೀರವಾಡಿ ಕಾರ್ಖಾನೆಯ ಆವರಣದಲ್ಲಿ ಇದ್ದ ಸರ್ಕಾರಿ ವಾಹನ, ಕಾರ್ಖಾನೆ ಮತ್ತು ಸಾರ್ವಜನಿಕರ ವಾಹನಗಳು ದಿನಾಂಕ:13.11.2025 ರಂದು ಸಂಜೆ 5:00 ಗಂಟೆಗೆ ಸುಟ್ಟು ಹಾನಿಯಾಗಿರುತ್ತವೆ. ಸದರಿ ವಾಹನಗಳ ವಿಮೆಗಳಿಗೆ ಸಂಬಂಧಿಸಿದಂತೆ ಪರಿಶೀಲಿಸಲಾಗಿ, ನಾಲ್ಕು ವಾಹನಗಳ ವಾರಸುದಾರರು/ಮಾಲೀಕರು ಸದ್ಯ ಕಬ್ಬು ಕಟಾವು ಮತ್ತು ಕಾರ್ಖಾನೆಗಳಿಗೆ ಪೂರೈಸಲು ಕೆಲಸ ಮಾಡುತ್ತಿರುವುದರಿಂದ ಬರುವುದಕ್ಕೆ ಆಗುವುದಿಲ್ಲವೆಂದು ತಿಳಿಸಿರುತ್ತಾರೆಂದು ಮತ್ತು ಉಳಿದವರು ಯಾವುದೇ ಪ್ರತಿಕ್ರಿಯೆ ನೀಡುತ್ತಿಲ್ಲವೆಂದು, ಒಟ್ಟು 41 ಸುಟ್ಟು ಹಾನಿಯಾಗಿರುವ / ಜಖಂಗೊಂಡಿರುವ ವಾಹನಗಳ ವಿಮೆದಾರರ ಯಾದಿಯನ್ನು ತಯಾರಿಸಿ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ, ಜಮಖಂಡಿ ಇವರು ವರದಿ ಸಲ್ಲಿಸಿರುತ್ತಾರೆ. ಸದರಿಯವರು ಅಂದಾಜಿಸಿದಂತೆ ಸುಟ್ಟುಹೋಗಿದ್ದ / ಜಖಂಗೊಂಡಿದ್ದ ವಾಹನಗಳ ನಷ್ಟದ ಮೊತ್ತ ರೂ.25.28 ಲಕ್ಷಗಳಾಗಿದ್ದು, ಸದರಿ ನಷ್ಟದ ಮೊತ್ತವಾದ ರೂ.25.28 ಲಕ್ಷಗಳನ್ನು ಮಾಲೀಕರಿಗೆ ಪರಿಹಾರವಾಗಿ ನೀಡುವುದಕ್ಕಾಗಿ ಸರ್ಕಾರವು ಬೆಳಗಾವಿಯ ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆಯ ಮೂಲಕ ಜಿಲ್ಲಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ ಇವರಿಗೆ ಬಿಡುಗಡೆಗೊಳಿಸಲಾಗಿದ್ದು, ಸಂಬಂಧಪಟ್ಟ ಕಬ್ಬು ಲಾರಿಗಳ / ಟ್ರ್ಯಾಕ್ಟರ್ ಮಾಲೀಕರಿಗೆ ಪರಿಹಾರದ ಮೊತ್ತವನ್ನು ಪಾವತಿಸಲು ಜಿಲ್ಲಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ ಇವರ ಮೂಲಕ ಕ್ರಮವಹಿಸಲಾಗುತ್ತಿದೆ.<br>ಮುಂದುವರೆದು, ಜಿಲ್ಲಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ ಪ್ರಸ್ತಾವನೆಯಂತೆ, 96 ಟ್ರೇಲರ್‌ಗಳಲ್ಲಿನ 1033 ಟನ್ ಕಬ್ಬು ಸುಟ್ಟು ಹಾಳಾಗಿದ್ದು, ಇದರ ಮೊತ್ತ ರೂ.34,08,900-00 (ಮೂವತ್ತು ನಾಲ್ಕು ಲಕ್ಷದ ಎಂಟು ಸಾವಿರದ ಒಂಭೈನೂರುಗಳು) ಗಳು ಆಗಿರುತ್ತದೆ. ಈ ಮೊತ್ತವನ್ನು ಸಂಬಂಧಿಸಿದ ರೈತರಿಗೆ ಮಾನವೀಯತೆ ಆಧಾರದ ಮೇಲೆ ಪಾವತಿಸಲು ಗೋದಾವರಿ ಬಯೋರಿಫೈನರೀಸ್ ಲಿಮಿಟೆಡ್, ಸೈದಾಪುರ ಕಾರ್ಖಾನೆಯ ಮಾಲೀಕರು ಸಮ್ಮತಿಸಿರುತ್ತಾರೆ. |

**ಸಂಖ್ಯೆ**: ಸಿಐ 355 ಎಸ್‌ಜಿಎಫ್ 2025

**(ಶಿವಾನಂದ ಎಸ್ ಪಾಟೀಲ್)**
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು

ಅನುಬಂಧ-1

STATE: GOK

As on DATE : 30-11-2025

| SL. NO | Name of the factory | Crushing capacity (TCD) | Total cane crushed (in MTs) | Sugar produced (in MT) | Recovery (%) | FRP (Rs./MT) | Amount Payable as per FRP (Rs.in lakhs) (4X7) | Amount paid (Rs.in lakhs) | Balance (Rs. in lakhs) (8-9) | % of payment (9/8*100) | Date of start | Date of close |
|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 |
| | BELAGAVI DISTRICT | | | | | | | | | | | |
| 1 | ARIHANT SUGARS INDUSTRIESS LTD, JAINAPUR. CHIKODI TALUK., BELAGAVI DISTRICT. | 2500 | 57580 | 5341 | 10.22 | 4076 | 2347 | 534 | 1813 | 23 | 09-11-2025 | |
| 2 | ATHANI SUGAR LTD., ATHANI TALUK. BELAGAVI DISTRICT. | 12000 | 215800 | 17260 | 10.53 | 3851 | 8310 | 1833 | 0 | 22 | 10-11-2025 | |
| 3 | BELGAUM SUGARS PVT LTD., HUDALI VILLAGE, BELAGAVI TALUK & DISTRICT | 7500 | 260935 | 26630 | 10.21 | 4086 | 10662 | 6598 | 4064 | 62 | 10-11-2025 | |
| 4 | CHIDANAND BASAPRABHU KORE SSK LTD., CHIKKODI TALUK. BELAGAVI DISTRICT. | 10000 | 230095 | 16310 | 10.78 | 3969 | 9132 | 0 | 9132 | 0 | 10-11-2025 | |
| 5 | EID PARRY (INDIA) LTD.,KHANPET, RAMADURGA TALUK. BELAGAVI DISTRICT.(LESSEE OF DHANALAKSHMI SSK LTD.,) | 5000 | 195103 | 18137 | 11.23 | 4131 | 8060 | 6936 | 1124 | 86 | 23-10-2025 | |
| 6 | GHATAPRABHA SSK LTD., GOKAK TALUK. BELAGAVI DISTRICT. | 2200 | 49350 | 4965 | 10.40 | 3823 | 1887 | 226 | 1661 | 12 | 09-11-2025 | |
| 7 | GOKAK SUGARS LTD., GOKAK TALUK. BELAGAVI DISTRICT. | 4500 | 94960 | 9606 | 10.58 | 3941 | 3742 | 0 | 3742 | 0 | 10-11-2025 | |
| 8 | HALASIDANATHA SSK LTD., NIPPANI TALUK. BELAGAVI DISTRICT. | 8500 | 82900 | 3373 | 9.96 | 3958 | 3281 | 746 | 2535 | 23 | 10-11-2025 | |
| 9 | HARSHA SUGARS LTD., SAVADATTI TALUK, BELAGAVI DISTRICT. | 5000 | 151293 | 13975 | 10.17 | 3686 | 5879 | 3491 | 2388 | 59 | 10-11-2025 | |
| 10 | HIRANYAKESHI SSK LTD., HUKKERI TALUK. BELAGAVI DISTRICT. | 8000 | 95811 | 7850 | 8.00 | 3747 | 3590 | 0 | 3590 | 0 | 13-11-2025 | |
| 11 | KRISHNA SSK LTD., ATHANI TALUK. BELAGAVI DISTRICT. | 5500 | 129600 | 13030 | 10.39 | 3827 | 4967 | 0 | 4967 | 0 | 10-11-2025 | |
| 12 | LAILA SUGARS PVT. LTD., (LESSEE OF BHAGYALAKSHMI SSK LTD) KHANAPUR TALUK. BELAGAVI DISTRICT. | 4500 | 77055 | 7058 | 9.16 | 3827 | 2949 | 1344 | 1605 | 46 | 07-11-2025 | |
| 13 | MALAPRABHA SSK LTD., M.K. Hubli, BAILAHONGALA TALUK. BELAGAVI DISTRICT. | 3500 | 46720 | 3899 | 9.45 | 3844 | 1796 | 0 | 1796 | 0 | 16-11-2025 | |
| 14 | RENUKA SUGARS (LESSEE OF RAIBAGH SSK LTD.). RAIBAGH, BELAGAVI DISTRICT | 4500 | 64330 | 5595 | 10.02 | 3713 | 2389 | 0 | 2389 | 0 | 10-11-2025 | |
| 15 | RENUKA SUGAR S LTD.,BURLATTI, ATHANI TALUK.BELAGAVI DISTRICT | 10000 | 230500 | 6994 | 10.04 | 3816 | 8796 | 0 | 8796 | 0 | 10-11-2025 | |
| 16 | RENUKA SUGARS LTD., MANOLI, SAVADATTI TALUK. BELAGAVI DISTRICT. | 7500 | 197070 | 4355 | 10.71 | 4000 | 7883 | 0 | 7883 | 0 | 10-11-2025 | |
| 17 | SATISH SUGARS LTD. GOKAK TALUK. BELAGAVI DISTRICT. | 10000 | 264340 | 16174 | 10.32 | 4034 | 10663 | 6461 | 4202 | 61 | 11-11-2025 | |

| SL. NO | Name of the factory | Crushing capacity (TCD) | crushed (In MTs) | produced (In MT) | Recovery (%) | FRP (Rs./MT) | per FRP (Rs.in lakhs) (4X7) | paid (Rs.In lakhs) | (Rs. In lakhs) (8-9) | % of payment (9/8*100) | Date of start | Date of close |
|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 |
| 18 | SANGAM SSK N., HIDIKAL DAM, HUKKERI TALUK, BELAGAVI DISTRICT. | 2500 | 56142 | 5855 | 10.72 | 4188 | 2351 | 916 | 0 | 39 | 11-11-2025 | |
| 19 | SHIRAGUPPI SUGAR WORKS LTD., KHANAPUR ROAD, BELAGAVI DISTRICT | 7500 | 175021 | 13783 | 10.85 | 4142 | 7249 | 1633 | 5616 | 23 | 09-11-2025 | |
| 20 | SHIVASHAKTI SUGARS LTD., RAIBAG TALUK. BELAGAVI DISTRICT. | 18000 | 382851 | 26211 | 10.90 | 3837 | 14690 | 8988 | 0 | 61 | 09-11-2025 | |
| 21 | SHIVASAGAR SUGAR AND AGRO PRODUCTS LTD., SUBSIDIARY OF GUDAGANTI SUGARS ANS BIOENERGIES PVT LTD UDUPUDI TALUK RAMDURG BELAGAVI DISTRICT | 4800 | 99843 | 8288 | 10.43 | 3775 | 3769 | 959 | 2811 | 25 | 10-11-2025 | |
| 22 | SOMESHWARA SSK LTD., BAILAHONGALA TALUK. BELAGAVI DISTRICT. | 2500 | 60060 | 6040 | 10.77 | 4339 | 2606 | 1461 | 1145 | 56 | 13-11-2025 | |
| 23 | SOUBHAGYALAKSHMI SUGARS, HIRENANDHI, BELAGAVI DISTRICT | 3500 | 101657 | 9635 | 9.48 | 3609 | 3669 | 4154 | 0 | 113 | 10-11-2025 | |
| 24 | SRI BASAVESHAWARA SUGARS LTD BALLIGERI TALUK:ATHANI DISTRICT: BELAGAVI | 800 | 16702 | 65 | 9.55 | 3834 | 640 | 150 | 490 | 23 | 09-11-2025 | |
| 25 | UGAR SUGARS LTD., UGARKHURD, ATHANI TALUK. BELAGAVI DISTRICT. | 20000 | 286300 | 24225 | 10.50 | 3723 | 10659 | 906 | 9753 | 8 | 10-11-2025 | |
| 26 | VENKATESWARA POWER PROJECT LTD., CHIKKODI TALUK. BELAGAVI DISTRICT. | 12000 | 273295 | 29805 | 11.00 | 4156 | 11358 | 5240 | 6118 | 46 | 09-11-2025 | |
| 27 | VISHWARAJ SUGARS LTD., HUKKERI TALUK. BELAGAVI DISTRICT. | 11000 | 190571 | 12015 | 10.38 | 3996 | 7615 | 1300 | 6315 | 17 | 10-11-2025 | |
| 28 | ICPL- ALAGAWADI BIRESWARA SUGARS, ALAGAWADI, RAIBAG TALUK, BELAGAVI DISTRICT. | 12000 | 199624 | 16700 | 10.21 | 3605 | 7196 | 1797 | 5400 | 25 | 10-11-2025 | |
| 29 | INAMDAR SUGARS LTD, HIREKOPPPA VILLAGE, MARAKUMBI VILLAGE, TALUK SAUNDATTI, BELAGAVI DISTRICT. | 4900 | 113977 | 9175 | 10.75 | 3969 | 4524 | 0 | 4524 | 0 | 08-11-2025 | |
| | **TOTAL** | **210200** | **4399686** | **342546** | **7.79** | | **172661** | **55669** | **103859** | **32** | | |
| | **BAGALKOTE DISTRICT** | | | | | | | | | | | |
| 30 | BADAMI SUGARS LTD., MUSTIGERI, BADAMI TALUK, BAGALKOTE DISTRICT. UNIT-5 | 5000 | 51359 | 4126 | 8.94 | 3803 | 1953 | 107 | 1846 | 5 | 14-11-2025 | |
| 31 | BILAGI SUGAR MILL LTD., BILAGI TALUK. BAGALKOTE DISTRICT. | 15000 | 232866 | 16219 | 10.19 | 3609 | 8404 | 2123 | 6281 | 25 | 12-11-2025 | |
| 32 | EID PARRY (INDIA) LTD., NAGARAL, NAINEGALI, BAGALKOT TALUK. & DISTRICT. | 7500 | 215216 | 16248 | 10.61 | 4111 | 8848 | 7536 | 1311 | 85 | 24-10-2025 | |
| 33 | GEM SUGARS LTD., BILAGI TALUK. BAGALKOTE DISTRICT. | 6500 | 129298 | 9899 | 9.75 | 3758 | 4859 | 1222 | 3637 | 25 | 11-11-2025 | |
| 34 | GODAVARI SUGARS LTD., MUDHOL TALUK. BAGALKOTE DISTRICT. | 20000 | 271546 | 16532 | 10.44 | 3778 | 10259 | 471 | 9788 | 5 | 14-11-2025 | |

| | | | (In MTs) | (In MT) | (%) | (Rs./MT) | (Rs.in lakhs) (4X7) | lakhs) | lakhs) (8-9) | (9/8*100) | Date of start | Date of close |
|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 |
| 35 | INDIAN CANE POWER LTD., UTTUR, MUDHOL TALUK. BAGALKOTE DISTRICT. | 24000 | 296168 | 27838 | 10.30 | 3716 | 11006 | 2666 | 8340 | 24 | 15-11-2025 | |
| 36 | JAMAKHANDI SUGARS LTD., HIREPADASALAGI, JAMKHANDI TALUK. BAGALKOTE DISTRICT. | 11500 | 196538 | 12490 | 8.79 | 3733 | 7337 | 1771 | 5566 | 24 | 11-11-2025 | |
| 37 | MELBRO SUGARS LTD, SHIRURU, BAGALKOTE TALUK & DISTRICT. | 5000 | 150450 | 8680 | 10.03 | 3661 | 5508 | 1310 | 4198 | 24 | 09-11-2025 | |
| 38 | MRN CANE POWER , KALLAPUR, DISTRICT:BAGALKOTE | 10000 | 151860 | 8158 | 9.90 | 3810 | 5786 | 1114 | 4672 | 19 | 11-11-2025 | |
| 39 | NIRANI SUGARS LTD., MUDHOL TALUK. BAGALKOTE DISTRICT. UNIT-1 | 20000 | 263491 | 16383 | 10.29 | 3775 | 9947 | 433 | 9514 | 4 | 17-11-2025 | |
| 40 | PRABULINGESHWARA SUGARS LTD., JAMKHANDI TALUK. BAGALKOTE DISTRICT. | 8500 | 194640 | 12590 | 10.28 | 3720 | 7241 | 1849 | 5392 | 26 | 17-11-2025 | |
| 41 | SHREE KEDHARNATHA SUGARS AND AGRO PRODUCTS LTD, KERAKALAMATTI, BADAMI TALUK,BAGALKOT DISTRICT UNIT-4 | 5000 | 83108 | 7870 | 10.27 | 3768 | 3132 | 176 | 2956 | 6 | 15-11-2025 | |
| 42 | SHRI SAI PRIYA SUGARS LTD., HIPPARAGI-MYGUR JAMKHANDI TALUK, BAGALKOT DISTRICT. | 15000 | 252112 | 14533 | 10.43 | 3482 | 8779 | 537 | 8242 | 6 | 15-11-2025 | |
| 43 | BILAGI SUGAR MILL LTD (LESSEE of RYTARA SSK) RANNANAGAR, MUDHOL TALUK, BAGALKOTE DISTRICT | 5000 | 51980 | 4170 | 9.35 | 3816 | 1984 | 0 | 1984 | 0 | 16-11-2025 | |
| | TOTAL | 158000 | 2540632 | 175735 | 6.92 | | 95040 | 21314 | 73726 | 22 | | |
| | BELLARY DISTRICT | | | | | | | | | | | |
| 44 | NSL SUGARS (TUNGABHADRA) LTD., DESANUR.SIRUGUPPA TALUK, BALLARI DISTRICT | 3500 | 147909 | 13565 | 9.64 | 3291 | 4868 | 2867 | 2000 | 59 | 16-10-2025 | |
| | TOTAL | 3500 | 147909 | 13565 | 9.17 | | 4868 | 2867 | 2000 | 59 | | |
| | BIDAR DISTRICT | | | | | | | | | | | |
| 45 | BHALKESHWAR SUGARS LTD, BAJOLAGA, BHALKI TALUK., BIDAR DISTRICT. | 5000 | 55475 | 2327 | 8.74 | 3294 | 1827 | 1188 | 639 | 65 | 15-11-2025 | |
| 46 | BIDAR KISSAN SHAKKAR KARKHANA LTD., MOGDAL VILLAGE, NATIONAL HIGHWAY NO.9, BIDAR TALUK & DISTRICT | 3500 | 96879 | 7807 | 8.65 | 3533 | 3423 | 882 | 2541 | 26 | 06-11-2025 | |
| 47 | MAHATHMA GANDHI SSK LTD., BHALKI TALUK. BIDAR DISTRICT. | 2500 | 65481 | 795 | 8.91 | 3412 | 2234 | 2953 | 0 | 132 | 10-11-2025 | |
| 48 | NARANJA SSK LTD., IMAMPUR, BIDAR TALUK & DISTRICT. | 2500 | 31541 | 2137 | 8.17 | 3377 | 1065 | 0 | 1065 | 0 | 17-11-2025 | |
| 49 | SHREE BHAVANI SUGARS, BAROOR, BIDAR TALUK & DISTRICT. | 1000 | 70262 | 5491 | 7.81 | 3291 | 2312 | 1732 | 581 | 75 | 26-10-2025 | |
| | TOTAL | 14500 | 319638.593 | 18557.5 | 5.81 | | 10862 | 6755 | 4826 | 62 | | |

| SL. NO | Name of the factory | Crushing capacity (TCD) | crushed (In MTs) | produced (in MT) | Recovery (%) | FRP (Rs./MT) | per FRP (Rs.in lakhs) (4X7) | paid (Rs.in lakhs) | (Rs. in lakhs) (8-9) | % of payment (9/8*100) | Date of start | Date of close |
|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 |
| | **CHAMARAJNAGAR DISTRICT** | | | | | | | | | | | |
| 50 | BANNARI AMMAN SUGARS , KUNTHUR, KOLLEGAL TALUK., CHAMARAJNAGAR DISTRICT. | 4500 | 450976 | 39285 | 8.89 | 3291 | 14842 | 14373 | 468 | 97 | 02-07-2025 | |
| | **TOTAL** | **4500** | **450976** | **39285** | **8.71** | | **14842** | **14373** | **468** | **97** | | |
| | **DAVANAGERE** | | | | | | | | | | | |
| 51 | DAVANAGERE SUGARS LTD., DAVANAGERE TALUK.& DISTRICT. | 4750 | 128518 | 8437 | 6.78 | 3291 | 4230 | 2478 | 1752 | 59 | 08-10-2025 | |
| | **TOTAL** | **4750** | **128518** | **8437** | **6.56** | | **4230** | **2478** | **1752** | **59** | | |
| | **GADAG DISTRICT** | | | | | | | | | | | |
| 52 | VIJAYANAGAR SUGARS (LESSEE OF MRUDAGIRI SSK LTD.), MUNDARAGI TALUK GADAG DISTRICT. | 5000 | 251716 | 21138 | 9.48 | 3329 | 8380 | 5986 | 2394 | 71 | 17-10-2025 | |
| | **TOTAL** | **5000** | **251716** | **21138** | **8.40** | | **8380** | **5986** | **2394** | **71** | | |
| | **HASSAN DISTRICT** | | | | | | | | | | | |
| 53 | CHAMUNDESWARI SUGARS LTD., (LESSEE OF HEMAVATHI SSK ) CHANNARAYAPATNA TALUK, HASSAN DISTRICT. | 3500 | 300024 | 27318 | 9.14 | 3291 | 9874 | 7676 | 2198 | 78 | 27-06-2025 | |
| | **TOTAL** | **3500** | **300024** | **27318** | **9.11** | | **9874** | **7676** | **2198** | **78** | | |
| | **HAVERI DISTRICT** | | | | | | | | | | | |
| 54 | GM SUGARS LTD ., ( LESSEE OF KARNATAKA SSK LTD.,) SANGURU, HAVERI TALUK & DISTRICT. | 4800 | 90864 | 5698 | 7.96 | 3391 | 3081 | 1103 | 1978 | 36 | 02-11-2025 | |
| 55 | GM SUGARS AND ENERGY LTD., UNIT-2, CHATTIHALLI, KIRIGERE, RATTIHALLI TALUK, HAVERI DISTRICT | 10000 | 240013 | 0 | 8.20 | 3391 | 8139 | 6327 | 1812 | 78 | 20-10-2025 | |
| 56 | V.I.N.P. DISTILLIRIES & SUGARS LTD, KONANKERE, SHIGGAVI TALUK, HAVERI DISTRICT. | 3500 | 218111 | 10655 | 9.09 | 3294 | 7185 | 5315 | 1870 | 74 | 20-10-2025 | |
| | **TOTAL** | **18300** | **548988** | **16353** | **2.98** | | **18405** | **12746** | **5659** | **69** | | |
| | **KALABURGI DISTRICT** | | | | | | | | | | | |
| 57 | KPR SUGAR & APPARELS LTD., CHINAMAGERI, AFZALPUR, KALABURUGI DISTRICT. | 10000 | 148884 | 6303 | 9.30 | 3291 | 4900 | 3753 | 1147 | 77 | 18-11-2025 | |
| 58 | NSL SUGARS (LESSE OF ALAND SSK), BHOOSANUR, KALABURGI DISTRICT | 7500 | 101845 | 7591 | 8.67 | 3515 | 3580 | 0 | 3580 | 0 | 18-11-2025 | |
| 59 | SHREE RENUKA SUGAR S LTD., HAVALAGA, AFZALPURA TALUK. KALABURGI DISTRICT | 9000 | 80110 | 2730 | 8.70 | 3326 | 2664 | 0 | 2664 | 0 | 18-11-2025 | |
| 60 | SIDDASIRI ETHANOL & POWER UNIT SYSTEM, CHINCHOLI, TQ, KALABURGI DISTRICT | 5000 | 108078 | 0 | 8.30 | 3519 | 3803 | 1081 | 2722 | 28 | 01-11-2025 | |
| 61 | UGAR SUGARS LTD., MALLI UNIT, JEWARGI TALUK. KALABURGI DISTRICT | 2500 | 18450 | 737 | 8.31 | 3291 | 607 | 157 | 450 | 26 | 23-11-2025 | |
| | **TOTAL** | **34000** | **457367** | **19361** | **4.23** | | **15554** | **4991** | **10563** | **32** | | |

| 1 | 2 | capacity (TCD) | (In MTs) | produced (In MT) | (%) | (Rs./MT) | per FRP (Rs.in lakhs) (4X7) | paid (Rs.in lakhs) | (Rs. in lakhs) (8-9) | % of payment (9/8*100) | Date of start | Date of close |
|---|---|---|---|---|---|---|---|---|---|---|---|---|
| | | 3 | 4 | 5 | 6 | 7 | 8 | 9 | 10 | 11 | 12 | 13 |
| | **MANDYA DISTRICT** | | | | | | | | | | | |
| 62 | COROMANDEL SUGARS (ICL SUGARS) K.R.PET TALUK. MANDYA DISTRICT. | 5000 | 312118 | 28721 | 9.26 | 3291 | 10272 | 10272 | 0 | 100 | 10-07-2025 | 16-10-2025 |
| 63 | THE MYSORE SUGAR COMPANY LIMITED. SUGAR TOWN, MANDYA DISTRICT. | 5000 | 119206 | 7757 | 6.51 | 3291 | 3923 | 3670 | 254 | 94 | 23-07-2025 | 20-10-2025 |
| 64 | MRN CANE POWER AND BIORIFINERIES PVT,LTD (LESSEE OF PANDAVAPURA SSK LTD..) PANDAVAPURA TALUK. MANDYA DISTRICT. | 3500 | 454109 | 42650 | 8.90 | 3291 | 14945 | 14945 | 0 | 100 | 04-07-2025 | 10-11-2025 |
| 65 | NSL SUGARS LTD., MADDUR TALUK. MANDYA DISTRICT. | 5000 | 516147 | 48427 | 9.39 | 3291 | 16986 | 16986 | 0 | 100 | 09-07-2025 | 08-11-2025 |
| 66 | CHAMUNDESWARI SUGARS LTD., MADDUR TALUK. MANDYA DISTRICT. | 5000 | 591235 | 54327 | 9.30 | 3291 | 19458 | 15261 | 4197 | 78 | 22-06-2025 | |
| | **TOTAL** | **23500** | **1992815** | **181882** | **9.13** | | **65584** | **61133** | **4461** | **93** | | |
| | **MYSORE DISTRICT** | | | | | | | | | | | |
| 67 | BANNARI AMMAN SUGARS LTD., NANJANGUD TALUK. MYSORE DISTRICT. | 7500 | 752329 | 68301 | 9.09 | 3291 | 24759 | 25012 | 0 | 101 | 02-07-2025 | 15-11-2025 |
| | **TOTAL** | **7500** | **752329** | **68301** | **9.08** | | **24759** | **25012** | **0** | **101** | | |
| | **UTTARA KANNADA DISTRICT** | | | | | | | | | | | |
| 68 | EID PARRY (INDIA) LTD., HALIYAL TALUK. UTTARA KANNADA DISTRICT. | 11500 | 303882 | 24096 | 10.22 | 4000 | 12155 | 10321 | 1835 | 85 | 01-11-2025 | |
| | **TOTAL** | **11500** | **303882** | **24096** | **7.93** | | **12155** | **10321** | **1835** | **85** | | |
| | **VIJAYAPURA DISTRICT** | | | | | | | | | | | |
| 69 | SHRI DUTT INDIA PRIVATE LTD. INDI TALUK. VIJAYAPURA DISTRICT | 4800 | 76040 | 5585 | 9.48 | 3594 | 2733 | 0 | 2733 | 0 | 15-11-2025 | |
| 70 | JAMKHANDI SUGARS LTD., UNIT-2, NAD KD, INDI TALUK, VIJAYAPURA DISTRICT | 3500 | 69240 | 5690 | | 3346 | 2317 | 644 | 1673 | 28 | 16-11-2025 | |
| 71 | KPR SUGAR MILL PVT LTD., SINDAGI TALUK, VIJAYAPURA DISTRICT | 10000 | 153339 | 8717 | 9.20 | 3512 | 5385 | 4971 | 414 | 92 | 17-11-2025 | |
| 72 | NANDI SSK LTD., VIJAYAPURA DISTRICT | 10000 | 137205 | 12720 | 9.90 | 3810 | 5228 | 0 | 5228 | 0 | 06-11-2025 | |
| 73 | SANGAMNATH SUGARS LTD.,YERAGAL B. K, SINDAGI TALUK, VIJAYAPURA DISTRICT. | 7000 | 77551 | 4138 | 8.60 | 3291 | 2552 | 2453 | 99 | 96 | 16-11-2025 | |
| 74 | SHREE BALAJI SUGARS & CHEMICAL PVT. LTD., YARAGAL, VIJAYAPURA DISTRICT. | 20000 | 266368 | 20833 | 10.25 | 3771 | 10045 | 7481 | 2564 | 74 | 28-10-2025 | |
| 75 | SHREE BASAVESHWARA SUGARS LTD., KARJOL VIJAYAPURA DISTRICT. | 7000 | 138822 | 11845 | 9.96 | 3775 | 5241 | 1254 | 3966 | 24 | 10-11-2025 | |
| 76 | SHREE BHIMASHANKAR SAHAKARI SAKKARE KARKHANE NIYAMIT, MARGUR. INDI TALUK, VIJAYAPUR DISTRICT | 3500 | 84239 | 6704 | 8.55 | 3291 | 2772 | 0 | 2772 | 0 | 07-11-2025 | |

| SL. NO | Name of the factory | Crushing capacity (TCD) | Total cane crushed (in MTs) | Sugar produced (In MT) | Recovery (%) | FRP (Rs./MT) | Payable as per FRP (Rs.in lakhs) (4X7) | Amount paid (Rs.in lakhs) | (Rs. in lakhs) (8-9) | % of payment (9/8*100) | Date of start | Date of close |
|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 |
| 77 | ICPL-DNAYANYOGI SHRI SHIVAKUMAR SWAMIJI SUGARS, HIREBEVANURU, INDI TALUK, VIJAYAPURA DISTRICT. | 5000 | 33193 | 2433 | 8.94 | 3415 | 1134 | 299 | 835 | 26 | 17-11-2025 | |
| | **TOTAL** | **70800** | **1035997** | **78684** | **7.59** | | **37406** | **17102** | **20303** | **46** | | |
| | **VIJAYANAGAR DISTRICT** | | | | | | | | | | | |
| 78 | MYLAR SUGARS LTD., BIRABBI, HOOVINAHADAGALI TALUK, BELLARY DISTRICT | 10000 | 232388 | 11298 | 9.18 | 3291 | 7648 | 5241 | 2408 | 69 | 20-10-2025 | |
| 79 | SHAMANUR SUGARS LTD., HARAPANAHALLI TALUK. VIJAYANAGAR DISTRICT. | 2500 | 123050 | 5563 | 9.10 | 3291 | 4050 | 1142 | 2908 | 28 | 14-10-2025 | |
| | **TOTAL** | **12500** | **355438** | **16861** | **4.74** | | **11697** | **6383** | **5315** | **55** | | |
| | **YADAGIRI DISTRICT** | | | | | | | | | | | |
| 80 | COREGREEN SUGAR & FUELS PVT. LTD. SHAHAPURA, TALUK. YADAGIRI DISTRICT. | 5000 | 67140 | 4755 | 8.59 | 3436 | 2307 | 1195 | 1112 | 52 | 17-11-2025 | |
| | **TOTAL** | **5000** | **67140** | **4755** | **7.08** | | **2307** | **1195** | **1112** | **52** | | |
| | **GRAND TOTAL** | **587050** | **14053055** | **1056853** | **7.52** | | **506822** | **255999** | **240461** | **53** | | |

**Some of the sugar factories have diverted cane juice / B-heavy molasses and may revise the sugar recovery, some factories have paid more than FRP fixed by GOI. Therefore columns 8 to 10 are not tallying.**

**COMMISSIONER FOR CANE DEVELOPMENT
AND DIRECTOR OF SUGAR**

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 213(256) ಕ್ಕೆ ಅನುಬಂಧ-2

| ಕ್ರ ಸಂ | ಕಾರ್ಖಾನೆಯ ಹೆಸರು | ದಿನಾಂಕ 31.03.2025 ರಲ್ಲಿದ್ದಂತೆ ಲಾಭ (ರೂ. ಲಕ್ಷಗಳಲ್ಲಿ) | | ದಿನಾಂಕ 31.03.2025 ರಲ್ಲಿದ್ದಂತೆ ನಷ್ಟ (ರೂ. ಲಕ್ಷಗಳಲ್ಲಿ) | |
|---|---|---|---|---|---|
| | | ವಾರ್ಷಿಕ ಲಾಭ | ಕ್ರೋಢೀಕೃತ ಲಾಭ | ವಾರ್ಷಿಕ ನಷ್ಟ | ಕ್ರೋಢೀಕೃತ ನಷ್ಟ |
| 1 | ಅರಿಹಂತ ಶುಗರ್ಸ್ ಇಂಡಸ್ಟ್ರೀಸ್ ಲಿ, ಜೈನಾಪುರ, ತಾಲ್ಲೂಕು: ಚಿಕ್ಕೋಡಿ, ಜಿಲ್ಲೆ: ಬೆಳಗಾವಿ. | ** | ** | 4881.58 | 12183.37 |
| 2 | ಅಥಣಿ ಶುಗರ್ಸ್ ಲಿ., ವಿಷ್ಣುಅಣ್ಣಾನಗರ, ತಾಲ್ಲೂಕು: ಅಥಣಿ, ಜಿಲ್ಲೆ: ಬೆಳಗಾವಿ | 885.68 | 26062.53 | ** | ** |
| 3 | ಚಿದಾನಂದ ಬಸಪ್ರಭು ಕೋರೆ ಸಹಕಾರಿ ಸಕ್ಕರ ಕಾರ್ಖಾನೆ ನಿ, ಶಾಂತಪ್ಪನ ಮಿರ್ಜಿ ನಗರ, ತಾಲ್ಲೂಕು: ಚಿಕ್ಕೋಡಿ, ಜಿಲ್ಲೆ: ಬೆಳಗಾವಿ. | 479.26 | ** | ** | 9224.2 |
| 4 | ಇ.ಐ.ಡಿ ಪ್ಯಾರಿ (ಇಂಡಿಯಾ) ಲಿಮಿಟೆಡ್, ಖಾನಪೇಟ್, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ. (ಧನಲಕ್ಷ್ಮಿ ಸಹಕಾರಿ ಸಕ್ಕರ ಲಿಮಿಟೆಡ್ ಗುತ್ತಿಗೆದಾರರು) | 551 | 1046 | ** | ** |
| 5 | ದಿ. ಘಟಪ್ರಭಾ ಸಹಕಾರಿ ಸಕ್ಕರ ಕಾರ್ಖಾನೆ ನಿ., ಗೋಕಾಕ್, ಜಿಲ್ಲೆ: ಬೆಳಗಾವಿ. | ** | ** | 1206.38 | 9305.62 |
| 6 | ಗೋಕಾಕ್ ಶುಗರ್ಸ್ ಲಿ., ಕೊಳವಿ, ತಾಲ್ಲೂಕು: ಗೋಕಾಕ್, ಜಿಲ್ಲೆ: ಬೆಳಗಾವಿ. | ** | ** | 180.6 | 7084.7 |
| 7 | ಶ್ರೀ ಹಾಲಸಿದ್ಧನಾಥ ಸಹಕಾರಿ ಸಕ್ಕರ ಕಾರ್ಖಾನೆ ನಿ., ಶಂಕರಾನಂದ ನಗರ, ನಿಪ್ಪಾಣಿ, ಜಿಲ್ಲೆ: ಬೆಳಗಾವಿ. | ** | ** | 4006.45 | 27205.95 |
| 8 | ಹರ್ಷ ಶುಗರ್ಸ್ ಲಿ., ತಾಲ್ಲೂಕು: ಸವದತ್ತಿ, ಜಿಲ್ಲೆ: ಬೆಳಗಾವಿ. | ** | ** | 4631.05 | 24047.21 |
| 9 | ಶ್ರೀ ಹಿರಣ್ಯಕೇಶಿ ಸಹಕಾರಿ ಸಕ್ಕರ ಕಾರ್ಖಾನೆ ನಿ., ಸಂಕೇಶ್ವರ, ಜಿಲ್ಲೆ: ಬೆಳಗಾವಿ. | ** | ** | 20124.64 | 44063.31 |
| 10 | ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ (ನಿ), ಪೋಸ್ಟ್:ಸಂಕೋನಟ್ಟಿ, ತಾಲ್ಲೂಕು:ಅಥಣಿ, ಜಿಲ್ಲೆ: ಬೆಳಗಾವಿ | ** | ** | 3487.63 | 9603.7 |
| 11 | ಲೈಲಾ ಶುಗರ್ಸ್ ಪ್ರೈ ಲಿ., (ಶ್ರೀ ಭಾಗ್ಯಲಕ್ಷ್ಮಿ ಸಹಕಾರಿ ಸಕ್ಕರ ಗುತ್ತಿಗೆದಾರರು), ಖಾನಾಪುರ, ಜಿಲ್ಲೆ, ಬೆಳಗಾವಿ | 19.27 | ** | ** | 2988.11 |
| 12 | ಶ್ರೀ ಮಲಪ್ರಭಾ ಸಹಕಾರಿ ಸಕ್ಕರ ಕಾರ್ಖಾನೆ ನಿ., ಎಂ.ಕೆ. ಹುಬ್ಬಳ್ಳಿ, ಜಿಲ್ಲೆ: ಬೆಳಗಾವಿ | ** | ** | 29.24 | 175.12 |
| 13 | ಶ್ರೀ ರೇಣುಕಾ ಶುಗರ್ಸ್ ಲಿ., ಯುನಿಟ್-III ಭಾವಚಿ, ಪೋಸ್ಟ್: ಮಕ್ಕಳ್ಳಿ, ತಾಲ್ಲೂಕು: ರಾಯಬಾಗ್, ಜಿಲ್ಲೆ: ಬೆಳಗಾವಿ. | ** | ** | 1973.19 | ** |
| 14 | ಶ್ರೀ ರೇಣುಕಾ ಶುಗರ್ಸ್ ಲಿ., ಯುನಿಟ್- 4 ಬುರ್ಲಟ್ಟಿ, ತಾಲ್ಲೂಕು: ಅಥಣಿ, ಜಿಲ್ಲೆ: ಬೆಳಗಾವಿ | ** | ** | 1689.98 | ** |
| 15 | ಶ್ರೀ ರೇಣುಕಾ ಶುಗರ್ಸ್ ಲಿ., ಯುನಿಟ್- I ಮುನೋಳಿ, ತಾಲ್ಲೂಕು: ಸವದತ್ತಿ, ಜಿಲ್ಲೆ: ಬೆಳಗಾವಿ | ** | ** | 1113.57 | ** |
| 16 | ಸತೀಶ್ ಶುಗರ್ಸ್ ಲಿ., ಹುಣಶ್ಯಾಳ್ ಗ್ರಾಮ, ತಾಲ್ಲೂಕು: ಗೋಕಾಕ್, ಜಿಲ್ಲೆ: ಬೆಳಗಾವಿ. | 3548.23 | 4929.09 | ** | ** |
| 17 | ಬೆಳಗಾಂ ಶುಗರ್ಸ್ ಪ್ರೈ ಲಿ, ಹುದಲಿ ಗ್ರಾಮ, ತಾಲ್ಲೂಕು ಮತ್ತು ಜಿಲ್ಲೆ: ಬೆಳಗಾವಿ | 741.46 | | ** | ** |

| ಕ್ರ ಸಂ | ಕಾರ್ಖಾನೆಯ ಹೆಸರು | ದಿನಾಂಕ 31.03.2025 ರಲ್ಲಿದ್ದಂತೆ ಲಾಭ (ರೂ. ಲಕ್ಷಗಳಲ್ಲಿ) | | ದಿನಾಂಕ 31.03.2025 ರಲ್ಲಿದ್ದಂತೆ ನಷ್ಟ (ರೂ. ಲಕ್ಷಗಳಲ್ಲಿ) | |
|---|---|---|---|---|---|
| 18 | ಶ್ರೀ ಸಂಗಮ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಸಂಕೇಶ್ವರ, ತಾಲ್ಲೂಕು: ಹುಕ್ಕೇರಿ, ಜಿಲ್ಲೆ: ಬೆಳಗಾವಿ | ** | ** | 19.65 | 94.45 |
| 19 | ಶಿರಗುಪ್ಪಿ ಶುಗರ್ ವರ್ಕ್ಸ್ ಲಿ. ತಾಲ್ಲೂಕು: ಕಾಗವಾಡ, ಜಿಲ್ಲೆ: ಬೆಳಗಾವಿ | 110.2 | 110.2 | ** | ** |
| 20 | ಶಿವಶಕ್ತಿ ಶುಗರ್ಸ್ ಲಿಮಿಟೆಡ್, ಸವದತ್ತಿ, ತಾಲ್ಲೂಕು: ರಾಯಬಾಗ, ಜಿಲ್ಲೆ: ಬೆಳಗಾವಿ | 582 | 4488 | ** | ** |
| 21 | ಶ್ರೀ ಶಿವಸಾಗರ ಶುಗರ್ ಅಂಡ್ ಅಗ್ರೋ ಪ್ರಾಡಕ್ಟ್ ಲಿಮಿಟೆಡ್ (ಗುಡಗುಂಟಿ ಶುಗರ್ಸ್ ಅಂಡ್ ಬಯೋಎನರ್ಜಿ ಲಿಮಿಟೆಡ್ ಇದರ ಅಂಗಸಂಸ್ಥೆ), ಉದುಪುಡಿ ಗ್ರಾಮ, ತಾಲ್ಲೂಕು: ರಾಮದುರ್ಗ, ಜಿಲ್ಲೆ: ಬೆಳಗಾವಿ | 379 | 380.98 | ** | ** |
| 22 | ಶ್ರೀ ಸೋಮೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಬೈಲಹೊಂಗಲ, ಜಿಲ್ಲೆ: ಬೆಳಗಾವಿ | ** | ** | 5198.38 | 18846.85 |
| 23 | ಸೌಭಾಗ್ಯಲಕ್ಷ್ಮಿ ಶುಗರ್ಸ್, ಹಿರೇನಂದಿ ಗ್ರಾಮ, ತಾಲ್ಲೂಕು ಗೋಕಾಕ್, ಜಿಲ್ಲೆ: ಬೆಳಗಾವಿ | ಪ್ರಸ್ತುತ ಕಾರ್ಖಾನೆಯ ಲೆಕ್ಕಪರಿಶೋಧನ ಪ್ರಗತಿಯಲ್ಲಿದ್ದು, ಲೆಕ್ಕಪರಿಶೋಧನೆ ಮುಗಿದ ನಂತರ 2024-25 ರ ಲಾಭ ಮತ್ತು ನಷ್ಟದ ವರದಿಯನ್ನು ಸಲ್ಲಿಸುತ್ತೇವೆ ಎಂದು ತಿಳಿಸಿರುತ್ತಾರೆ | | | |
| 24 | ಶ್ರೀ ಬಸವೇಶ್ವರ ಶುಗರ್ಸ್ ಲಿಮಿಟೆಡ್, ಬಳ್ಳಿಗೇರಿ, ತಾಲ್ಲೂಕು: ಅಥಣಿ, ಜಿಲ್ಲೆ: ಬೆಳಗಾವಿ | ** | ** | 797 | 1418 |
| 25 | ದಿ ಉಗಾರ್ ಶುಗರ್ ವರ್ಕ್ಸ್ ಲಿ, ಪೋಸ್ಟ್: ಉಗಾರ್‌ಖುರ್ದ್, ಜಿಲ್ಲೆ: ಬೆಳಗಾವಿ | ** | ** | 1624.95 | 1624.95 |
| 26 | ದಿ ಉಗಾರ್ ಶುಗರ್ ವರ್ಕ್ಸ್ ಲಿ, ನಾಗರಹಳ್ಳಿ, ಮಳ್ಳಿ, ತಾಲ್ಲೂಕು: ಜೇವರ್ಗಿ, ಜಿಲ್ಲೆ: ಕಲಬುರಗಿ | | | | |
| 27 | ವೆಂಕಟೇಶ್ವರ ಪವರ್ ಪ್ರಾಜೆಕ್ಟ್ ಲಿ., ಪೋಸ್ಟ್: ಬೇಡಿಕಿಹಾಲ, ತಾಲ್ಲೂಕು: ನಿಪ್ಪಾಣಿ, ಜಿಲ್ಲೆ: ಬೆಳಗಾವಿ. | 1555.57 | 14454.21 | ** | ** |
| 28 | ವಿಶ್ವರಾಜ್ ಶುಗರ್ಸ್ ಲಿಮಿಟೆಡ್, ಬೆಲ್ಲದ-ಬಾಗೇವಾಡಿ, ತಾಲ್ಲೂಕು: ಹುಕ್ಕೇರಿ, ಜಿಲ್ಲೆ: ಬೆಳಗಾವಿ | ** | 16283.83 | 3702.33 | ** |
| 29 | ಇಂಡಿಯನ್ ಕೇನ್ ಪವರ್ ಲಿ. ಘಟಕ: ಅಲಗವಾಡಿ ಬೀರೇಶ್ವರ ಶುಗರ್ಸ್ ಅಲಗವಾಡಿ ಗ್ರಾಮ, ತಾಲ್ಲೂಕು : ರಾಯಬಾಗ, ಜಿಲ್ಲೆ: ಬಾಗಲಕೋಟೆ | ** | ** | 3065.33 | 4612.04 |
| 30 | ಇನಾಂದಾರ್ ಶುಗರ್ಸ್ ಲಿಮಿಟೆಡ್, ಹಿರೇಕೊಪ್ಪ, ಮಾರಕುಂಬಿ ತಾಲ್ಲೂಕು:ಸವದತ್ತಿ ಜಿಲ್ಲೆ: ಬೆಳಗಾವಿ | ** | ** | 1239.85 | 1239.85 |
| 31 | ಬೀಳಗಿ ಶುಗರ್ ಮಿಲ್ ಲಿಮಿಟೆಡ್, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ. | ** | ** | 4952.22 | 9610.66 |
| 32 | ಇಐಡಿ ಪ್ಯಾರಿ (ಇಂಡಿಯಾ) ಲಿಮಿಟೆಡ್., ನಾಗರಾಳ, ನೈನಿಗಲಿ, ಬಾಗಲಕೋಟೆ ತಾಲ್ಲೂಕು, & ಜಿಲ್ಲೆ. | 660 | 2261 | ** | ** |
| 33 | ಜೆಮ್ ಶುಗರ್ಸ್ ಲಿ., ಕುಂದರಗಿ, ಬೀಳಗಿ, ಬಾಗಲಕೋಟೆ ಜಿಲ್ಲೆ. | 526.16 | 7962.87 | ** | ** |
| 34 | ಗೋದಾವರಿ ಬಯೋರಿಫೈನರೀಸ್ ಲಿ., ಸಮೀರವಾಡಿ, ಬಾಗಲಕೋಟೆ | ** | 13863.71 | 2715.97 | ** |
| 35 | ಇಂಡಿಯನ್ ಕೇನ್ ಪವರ್ ಲಿ., ಉತ್ತೂರು, ಮುಧೋಳ್, ಬಾಗಲಕೋಟೆ ಜಿಲ್ಲೆ. | 10611.8 | 10660.27 | ** | ** |
| 36 | ಜಮಖಂಡಿ ಶುಗರ್ಸ್ ಲಿಮಿಟೆಡ್, ಹಿರೇಪಡಸಲಗಿ, ಪೋಸ್ಟ್: ನಾಗನೂರು, ತಾಲ್ಲೂಕು: ಜಮಖಂಡಿ, ಜಿಲ್ಲೆ: ಬಾಗಲಕೋಟೆ | ** | ** | 1389.36 | 2560.1 |
| 37 | ಜಮಖಂಡಿ ಶುಗರ್ಸ್ ಲಿಮಿಟೆಡ್, ಘಟಕ-2, ನಾದ್‌ಕರಿ, ತಾಲ್ಲೂಕು: ಇಂಡಿ, ಜಿಲ್ಲೆ: ವಿಜಯಪುರ | | | | |
| 38 | ಮೆಲ್ಬೊ ಶುಗರ್ಸ್ ಲಿಮಿಟೆಡ್, ಶಿರೂರು, ತಾಲ್ಲೂಕು ಮತ್ತು ಜಿಲ್ಲೆ ಬಾಗಲಕೋಟೆ | ** | ** | 10773.71 | 22667.35 |

| ಕ್ರ ಸಂ | ಕಾರ್ಖಾನೆಯ ಹೆಸರು | ದಿನಾಂಕ 31.03.2025 ರಲ್ಲಿದ್ದಂತೆ ಲಾಭ (ರೂ. ಲಕ್ಷಗಳಲ್ಲಿ) | | ದಿನಾಂಕ 31.03.2025 ರಲ್ಲಿದ್ದಂತೆ ನಷ್ಟ (ರೂ. ಲಕ್ಷಗಳಲ್ಲಿ) | |
|---|---|---|---|---|---|
| 39 | ಎಂ.ಆರ್.ಎನ್ ಚಾಮುಂಡಿ ಕೇನ್ ಪವರ್ & ಬಯೋರಿಫೈನರೀಸ್ ಪ್ರೈ ಲಿ., ಕಲ್ಲಾಪುರ ಎಸ್.ಕೆ, ತಾಲ್ಲೂಕು: ಬಾದಾಮಿ, ಜಿಲ್ಲೆ: ಬಾಗಲಕೋಟೆ | | | | |
| 40 | ನಿರಾಣಿ ಶುಗರ್ಸ್ ಲಿಮಿಟೆಡ್, ಮುದೋಳ ತಾಲ್ಲೂಕು: ಮುದೋಳ ಜಿಲ್ಲೆ: ಬಾಗಲಕೋಟೆ | | | | |
| 41 | ಬಾದಾಮಿ ಶುಗರ್ಸ್ ಲಿಮಿಟೆಡ್, ಮುಷ್ಟಿಗೇರಿ, ತಾಲ್ಲೂಕು: ಬಾದಾಮಿ, ಜಿಲ್ಲೆ: ಬಾಗಲಕೋಟೆ | 2666.83 | 7831.98 | ** | ** |
| 42 | ಶ್ರೀ ಕೇದಾರನಾಥ್ ಶುಗರ್ ಅಂಡ್ ಆಗ್ರೋ ಪ್ರಾಡಕ್ಟ್ಸ್ ಲಿಮಿಟೆಡ್, ಕೆರಕಲಮಟ್ಟಿ, ತಾಲ್ಲೂಕು: ಬಾದಾಮಿ, ಜಿಲ್ಲೆ: ಬಾಗಲಕೋಟೆ | | | | |
| 43 | ಶ್ರೀ ಸಾಯಿಪ್ರಿಯ ಶುಗರ್ಸ್ ಲಿ., ಹಿಪ್ಪರಗಿ-ಮೈಗೂರ, ತಾಲ್ಲೂಕು: ಜಮಖಂಡಿ ಜಿಲ್ಲೆ: ಬಾಗಲಕೋಟೆ | | | | |
| 44 | ಶ್ರೀ ಪ್ರಭುಲಿಂಗೇಶ್ವರ ಶುಗರ್ಸ್ & ಕೆಮಿಕಲ್ಸ್ ಲಿ., ಜಮಖಂಡಿ ತಾಲ್ಲೂಕು, ಜಿಲ್ಲೆ: ಬಾಗಲಕೋಟೆ | 1348.54 | ** | ** | ** |
| 45 | ಬೀಳಗಿ ಶುಗರ್ ಮಿಲ್ ಲಿಮಿಟೆಡ್, ಯುನಿಟ್-2, (ರೈತರ ಸಹಕಾರಿ ಸಕ್ಕರೆ ಕಾರ್ಖಾನೆ ಗುತ್ತಿಗೆದಾರರು) ರನ್ನನಗರ, ತಿಮ್ಮಾಪೂರ, ತಾಲ್ಲೂಕು: ಮುಧೋಳ್, ಜಿಲ್ಲೆ: ಬಾಗಲಕೋಟೆ | ** | ** | 4003.44 | 40607.5 |
| 46 | ಎಸ್‌ಎಸ್‌ಎಲ್ ಶುಗರ್ಸ್ (ತುಂಗಾಭದ್ರಾ) ಲಿಮಿಟೆಡ್, ದೇಶನೂರು, ತಾಲ್ಲೂಕು: ಶಿರಗುಪ್ಪ, ಜಿಲ್ಲೆ: ಬಳ್ಳಾರಿ. | ** | ** | 1907.98 | 20991.08 |
| 47 | ಭಾಲ್ಕೇಶ್ವರ ಶುಗರ್ಸ್ ಲಿ. ಮಡಕಟ್ಟಿ ಕ್ರಾಸ್, ಬಾಜೋಳಗ, ತಾಲ್ಲೂಕು: ಭಾಲ್ಕಿ, ಜಿಲ್ಲೆ: ಬೀದರ್ | ** | ** | 4571.25 | 14144.73 |
| 48 | ಬೀದರ್ ಕಿಸಾನ್ ಸಕ್ಕರೆ ಕಾರ್ಖಾನೆ ಲಿ., ಮೊಗದಲ್ ಗ್ರಾಮ, ಪೋಸ್ಟ್: ಮಾರಕುಂಡಾ, ತಾಲ್ಲೂಕು ಮತ್ತು ಜಿಲ್ಲೆ ಬೀದರ್ | ** | ** | 1303.56 | 16148.59 |
| 49 | ದಿ ಮಹಾತ್ಮಗಾಂಧಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ. ಭಾಲ್ಕಿ, ಬೀದರ್ | ** | ** | 4427.92 | 5162.41 |
| 50 | ನಾರಂಜ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಇಮಾಮಾಪುರ ಗ್ರಾಮ, (ಜನವಾಡ ಹತ್ತಿರ) ತಾಲ್ಲೂಕು & ಜಿಲ್ಲೆ : ಬೀದರ್ | ** | ** | 970.9 | 73451.02 |
| 51 | ಶ್ರೀ ಭವಾನಿ ಖಂಡಸಾರಿ ಶುಗರ್ಸ್ ಲಿ, ಬರೂರು ಗ್ರಾಮ, ತಾಲ್ಲೂಕು & ಜಿಲ್ಲೆ ಬೀದರ್. | ** | ** | 342.71 | 1129.1 |
| 52 | ಬನ್ನಾರಿ ಅಮ್ಮನ್ ಶುಗರ್ಸ್ ಲಿ., ಯುನಿಟ್-III, ಕುಂತೂರು ಗ್ರಾಮ, ತಾಲ್ಲೂಕು: ಕೊಳ್ಳೇಗಾಲ, ಜಿಲ್ಲೆ: ಚಾಮರಾಜನಗರ. | 483.62 | ** | ** | ** |
| 53 | ದಾವಣಗೆರೆ ಶುಗರ್ಸ್ ಲಿ., ಕುಕ್ಕುವಾಡ, ತಾಲ್ಲೂಕು & ಜಿಲ್ಲೆ ದಾವಣಗೆರೆ | 10.93 | 88.22 | ** | ** |
| 54 | ವಿಜಯನಗರ ಶುಗರ್ಸ್ ಪ್ರೈ. ಲಿಮಿಟೆಡ್, (ಮೈದಗಿರಿ ಸಹಕಾರಿ ಸಕ್ಕರೆ ಕಾರ್ಖಾನೆ ಲಿಮಿಟೆಡ್ ನ ಗುತ್ತಿಗೆದಾರರು), ಗಂಗಾಪುರ ಗ್ರಾಮ ತಾಲ್ಲೂಕು: ಮುಂಡರಗಿ, ಜಿಲ್ಲೆ ಗದಗ. | ** | ** | 890.55 | 15421.97 |

<table>
<tr><th>ಕ್ರ ಸಂ</th><th>ಕಾರ್ಖಾನೆಯ ಹೆಸರು</th><th colspan="2">ದಿನಾಂಕ 31.03.2025 ರಲ್ಲಿದ್ದಂತೆ ಲಾಭ (ರೂ. ಲಕ್ಷಗಳಲ್ಲಿ)</th><th colspan="2">ದಿನಾಂಕ 31.03.2025 ರಲ್ಲಿದ್ದಂತೆ ನಷ್ಟ (ರೂ. ಲಕ್ಷಗಳಲ್ಲಿ)</th></tr>
<tr><td>55</td><td>ಚಾಮುಂಡೇಶ್ವರಿ ಶುಗರ್ಸ್ ಲಿ., (ಹೇಮಾವತಿ ಸಹಕಾರಿ ಸಕ್ಕರೆ ಕಾರ್ಖಾನೆಯ ಗುತ್ತಿಗೆದಾರರು), ಶ್ರೀನಿವಾಸಪುರ ತಾಲ್ಲೂಕು: ಚನ್ನರಾಯಪಟ್ಟಣ ಜಿಲ್ಲೆ:ಹಾಸನ</td><td rowspan="2">**</td><td rowspan="2">**</td><td rowspan="2">762.42</td><td rowspan="2">3608.22</td></tr>
<tr><td>56</td><td>ಶ್ರೀ ಚಾಮುಂಡೇಶ್ವರಿ ಶುಗರ್ಸ್ ಲಿ, ಭಾರತಿ ನಗರ, ತಾಲ್ಲೂಕು: ಮದ್ದೂರು, ಜಿಲ್ಲೆ:ಮಂಡ್ಯ</td></tr>
<tr><td>57</td><td>ಜಿಎಂ ಶುಗರ್ ಅಂಡ್ ಎನರ್ಜಿ ಲಿ.,(ಗುತ್ತಿಗೆದಾರರು ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆ ನಿ.) ಸಂಗೂರು, ತಾಲ್ಲೂಕು ಮತ್ತು ಜಿಲ್ಲೆ, ಹಾವೇರಿ.</td><td rowspan="2">484.15</td><td rowspan="2">**</td><td rowspan="2">**</td><td rowspan="2">**</td></tr>
<tr><td>58</td><td>ಜಿಎಂ ಶುಗರ್ ಅಂಡ್ ಎನರ್ಜಿ ಲಿ., ಯುನಿಟ್-2, ಚಟ್ಟಹಳ್ಳಿ ಗ್ರಾಮ, ತಾಲ್ಲೂಕು: ರಟ್ಟೆ ಹಳ್ಳಿ, ಜಿಲ್ಲೆ: ಹಾವೇರಿ</td></tr>
<tr><td>59</td><td>ವಿ.ಐ.ಎನ್.ಪಿ ಡಿಸ್ಟಲರೀಸ್ & ಶುಗರ್ಸ್ ಪ್ರೈ ಲಿ., ಕೋಣನಕೆರೆ ಗ್ರಾಮ, ಶಿಗ್ಗಾಂವ್ ತಾಲ್ಲೂಕು, ಹಾವೇರಿ ಜಿಲ್ಲೆ.</td><td>**</td><td>**</td><td>2184.01</td><td>3152.16</td></tr>
<tr><td>60</td><td>ಕೆಪಿಆರ್ ಶುಗರ್ & ಅಪ್ಪರಲ್ಸ್ ಲಿ., ಚಿನ್ನಮ್ಮಗೇರಿ ಗ್ರಾಮ, ಚೌಡಾಪುರ, ತಾಲ್ಲೂಕು: ಅಫಜಲಪುರ ಜಿಲ್ಲೆ: ಕಲಬುರಗಿ</td><td>242</td><td>**</td><td>**</td><td>**</td></tr>
<tr><td>61</td><td>ಎನ್ಎಸ್ಎಲ್ ಶುಗರ್ಸ್ (ಆಳಂದ ಸಹಕಾರಿ ಸಕ್ಕರೆ ಕಾರ್ಖಾನೆ ಗುತ್ತಿಗೆದಾರರು) ಭೂಸನೂರ್, ತಾಲ್ಲೂಕು: ಆಳಂದ, ಜಿಲ್ಲೆ: ಕಲಬುರಗಿ</td><td>**</td><td>14228.48</td><td>2106.91</td><td>**</td></tr>
<tr><td>62</td><td>ಶ್ರೀ ರೇಣುಕಾ ಶುಗರ್ಸ್ ಲಿಮಿಟೆಡ್, ಯುನಿಟ್-5, ಹವಳಗಾ ಗ್ರಾಮ, ತಾಲ್ಲೂಕು: ಅಫ್‌ಜಲಪುರ, ಜಿಲ್ಲೆ: ಕಲಬುರಗಿ.</td><td>**</td><td>**</td><td>9886.76</td><td>**</td></tr>
<tr><td>63</td><td>ಸಿದ್ದಸಿರಿ ಸೌಹಾರ್ದ ಸಹಕಾರಿ ನಿಯಮಿತ, ತಾಲ್ಲೂಕು: ಚಿಂಚೋಳಿ, ಜಿಲ್ಲೆ: ಕಲಬುರಗಿ</td><td colspan="4">ಕಾರ್ಖಾನೆಯು 2024-25 ನೇ ಹಂಗಾಮಿನಲ್ಲಿ ಕಬ್ಬು ಅರೆಯುವ ಕಾರ್ಯವನ್ನು ನಿರ್ವಹಿಸಿರುವುದಿಲ್ಲ.</td></tr>
<tr><td>64</td><td>ಕೋರಮಂಡಲ್ ಶುಗರ್ಸ್ ಲಿ., ಮಾಕವಳ್ಳಿ, ತಾಲ್ಲೂಕು: ಕೆ.ಆರ್.ಪೇಟೆ ಜಿಲ್ಲೆ: ಮಂಡ್ಯ</td><td>386.75</td><td>**</td><td>**</td><td>2073.33</td></tr>
<tr><td>65</td><td>ಮೈಸೂರು ಸಕ್ಕರೆ ಕಂಪನಿ ನಿ., ಸಕ್ಕರೆ ನಗರ, ಮಂಡ್ಯ</td><td>**</td><td>**</td><td>1983.09</td><td>60106.59</td></tr>
<tr><td>66</td><td>ಎಂ.ಆರ್.ಎನ್ ಕೇನ್ ಪವರ್ ಅಂಡ್ ಬಯೋರಿಫೈನರೀಸ್ ಪ್ರೈ ಲಿ, (ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಯ ಗುತ್ತಿಗೆದಾರರು), ತಾಲ್ಲೂಕು: ಪಾಂಡವಪುರ, ಜಿಲ್ಲೆ: ಮಂಡ್ಯ</td><td>**</td><td>**</td><td>337</td><td>39870</td></tr>
<tr><td>67</td><td>ಎನ್.ಎಸ್.ಎಲ್ ಶುಗರ್ಸ್, ಕೊಪ್ಪ, ತಾಲ್ಲೂಕು: ಮದ್ದೂರು, ಜಿಲ್ಲೆ:ಮಂಡ್ಯ</td><td>**</td><td>**</td><td>7785.18</td><td>25415.01</td></tr>
<tr><td>68</td><td>ಬನ್ನಾರಿ ಅಮ್ಮನ್ ಶುಗರ್ಸ್ ಲಿ, ಅಲಗಂಚಿ ಗ್ರಾಮ, ತಾಲ್ಲೂಕು: ನಂಜನಗೂಡು, ಜಿಲ್ಲೆ: ಮೈಸೂರು</td><td>4930.45</td><td>**</td><td>**</td><td>**</td></tr>
<tr><td>69</td><td>ಇಐಡಿ ಪ್ಯಾರಿ (ಇಂಡಿಯಾ) ಲಿ., ಹುಲ್ಲಟ್ಟಿ ಗ್ರಾಮ, ಹಳಿಯಾಳ, ಉತ್ತರ ಕನ್ನಡ ಜಿಲ್ಲೆ.</td><td>**</td><td>1297</td><td>470</td><td>**</td></tr>
</table>

| ಕ್ರ ಸಂ | ಕಾರ್ಖಾನೆಯ ಹೆಸರು | ದಿನಾಂಕ 31.03.2025 ರಲ್ಲಿದ್ದಂತೆ ಲಾಭ (ರೂ. ಲಕ್ಷಗಳಲ್ಲಿ) | | ದಿನಾಂಕ 31.03.2025 ರಲ್ಲಿದ್ದಂತೆ ನಷ್ಟ (ರೂ. ಲಕ್ಷಗಳಲ್ಲಿ) | |
|---|---|---|---|---|---|
| 70 | ದತ್ತ ಇಂಡಿಯಾ ಪ್ರೈ . ಲಿ , ಹಾವಿನಾಳ್, ತಾಲ್ಲೂಕು: ಇಂಡಿ, ಜಿಲ್ಲೆ: ವಿಜಯಪುರ. | ** | ** | 290.77 | 290.77 |
| 71 | ಕೆಪಿಆರ್ ಶುಗರ್ ಮಿಲ್ ಲಿ, ಆಲಮೇಲ ಗ್ರಾಮ, ತಾಲ್ಲೂಕು: ಸಿಂದಗಿ, ಜಿಲ್ಲೆ: ವಿಜಯಪುರ. | 718 | ** | ** | ** |
| 72 | ಶ್ರೀ ಸಾಯಿಬಸವ ಶುಗರ್ಸ್ ಲಿಮಿಟೆಡ್, ಪೋಸ್ಟ್:ಮಲಘಾಣ, ತಾಲ್ಲೂಕು: ಆಲಮೇಲ, ಜಿಲ್ಲೆ: ವಿಜಯಪುರ | 15.73 | ** | ** | 25404.29 |
| 73 | ನಂದಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ, ಕೃಷ್ಣಾನಗರ, ಪೋಸ್ಟ್: ಹೊಸೂರು, ತಾಲ್ಲೂಕು: ಬಬಲೇಶ್ವರ, ಜಿಲ್ಲೆ : ವಿಜಯಪುರ. | ** | ** | 3801.71 | 13702.39 |
| 74 | ಸಂಗಮನಾಥ ಶುಗರ್ಸ್ ಲಿಮಿಟೆಡ್, ಯರಗಲ್ ಬಿ.ಕೆ. ತಾಲ್ಲೂಕು: ಸಿಂದಗಿ, ಜಿಲ್ಲೆ: ವಿಜಯಪುರ | ** | ** | 2516.34 | 3386.1 |
| 75 | ಶ್ರೀ ಬಾಲಾಜಿ ಶುಗರ್ಸ್ & ಕೆಮಿಕಲ್ಸ್ ಪ್ರೈ, ಲಿಮಿಟೆಡ್, ಯರಗಲ ತಾಲ್ಲೂಕು: ಮುದ್ದೇಬಿಹಾಳ, ಜಿಲ್ಲೆ: ವಿಜಯಪುರ | 1598.86 | ** | ** | 2545.36 |
| 76 | ಶ್ರೀ ಬಸವೇಶ್ವರ ಶುಗರ್ಸ್ ಲಿಮಿಟೆಡ್, ಕಾರಜೋಳ ಗ್ರಾಮ, ಜಿಲ್ಲೆ: ವಿಜಯಪುರ | ** | ** | 411.04 | 587.94 |
| 77 | ಶ್ರೀ ಭೀಮಾಶಂಕರ್ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಮರಗೂರ, ತಾಲ್ಲೂಕು:ಇಂಡಿ, ಜಿಲ್ಲೆ: ವಿಜಯಪುರ. | ** | ** | 5700.35 | 24203.25 |
| 78 | ಇಂಡಿಯನ್ ಕೇನ್ ಪವರ್ ಲಿ. ಘಟಕ: ಧ್ಯಾನಯೋಗಿ ಶ್ರೀ ಶಿವಕುಮಾರಸ್ವಾಮಿಜಿ ಶುಗರ್ಸ್ ಲಿಮಿಟೆಡ್, ಹಿರೇಬೇವನೂರು ಗ್ರಾಮ, ತಾಲ್ಲೂಕು : ಇಂಡಿ ಜಿಲ್ಲೆ: ವಿಜಯಪುರ | ** | ** | 867.93 | 867.93 |
| 79 | ಮೈಲಾರ ಶುಗರ್ಸ್ ಲಿ., ಬೀರಬ್ಬಿ, ತಾಲ್ಲೂಕು: ಹೂವಿನಹಡಗಲಿ, ಜಿಲ್ಲೆ:ವಿಜಯನಗರ | 9.2.53 | 97.37 | ** | ** |
| 80 | ಶ್ಯಾಮನೂರು ಶುಗರ್ಸ್ ಲಿ., ದುಗ್ಗಾವತಿ, ತಾಲ್ಲೂಕು: ಹರಪನಹಳ್ಳಿ, ಜಿಲ್ಲೆ:ವಿಜಯನಗರ | ** | ** | 1879.28 | 2032.67 |
| 81 | ಕೋರ್‌ಗ್ರೀನ್ ಶುಗರ್ & ಫ್ಯುಯೆಲ್ಸ್ ಪ್ರೈ. ಲಿಮಿಟೆಡ್, ತುಮಕೂರು ಗ್ರಾಮ, ತಾಲ್ಲೂಕು:ವಡಗೇರ, ಜಿಲ್ಲೆ: ಯಾದಗಿರಿ | ** | ** | 6909.49 | 25737.72 |

ಆಯುಕ್ತರು ಕಬ್ಬು ಅಭಿವೃದ್ಧಿ
ಹಾಗೂ ಸಕ್ಕರೆ ನಿರ್ದೇಶಕರು